ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ಶಿಬಿರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೩ ಫೆಬ್ರವರಿ ೨೦೦೩ ಮತ್ತು ಮಾರ್ಚ್ ೨೦೦೩ ಸಂಚಿಕೆ ೭,೮

ಕೋಮು ಸೌಹಾರ್ದ ಮತ್ತು ಚಾರಿತ್ರ ನಿರ್ಮಾಣ

ಇಬ್ರಾಹಿಮ್ ಸಈದ್

★

ಬರಲಿರುವ ವಿನಾಶವನ್ನು ತಡೆಯಲು ಸೂತ್ರ

ಜೆ. ಸಿ. ಕುಮಾರಪ್ಪ

★ ಈ ಸಂಚಿಕೆಯಲ್ಲಿ ★

೧. ಕೋಮು ಸೌಹಾರ್ದ ಮತ್ತು ಚಾರಿತ್ರ ನಿರ್ಮಾಣ

–ಇಬ್ರಾಹಿಮ್ ಸಈದ್

ಕೋಮು ಸೌಹಾರ್ದತೆಗೆ ಧಕ್ಕೆ ಬರುವ ಎಲ್ಲ ಸೂಚನೆಗಳೂ ಕಾಣಬರುತ್ತಿವೆ. ಕೋಮು ಸೌಹಾರ್ದತೆಯ ವಿಷಯ ಪ್ರಾರಂಭದಿಂದಲೂ ರಾಜಕೀಯ ರೂಪ ತಾಳಿಕೊಂಡೇ ಬಂದಿದೆ. ಇತ್ತೀಚಿನ ವರ್ಷಗಳಲ್ಲಿ ಅದು ಹೆಚ್ಚಾಗಿದೆ. ಈ ವಿಷ ಚಕ್ರದಿಂದ ಹೇಗೆ ಬಿಡುಗಡೆ ಎಂಬುದೇ ಗೊತ್ತಾಗುತ್ತಿಲ್ಲ. ಈ ಸಮಸ್ಯೆಯ ಪರಿಹಾರ ಕುರಿತು ಒಬ್ಬೊಬ್ಬರು ಒಂದೊಂದು ರೀತಿ ಆಲೋಚಿಸುತ್ತಿದ್ದಾರೆ. ಅಂಥ ಪ್ರಕ್ರಿಯೆಯಲ್ಲಿ ಶ್ರೀ ಇಬ್ರಾಹಿಮ್ ಸಈದ್ ಅವರ ಈ ಲೇಖನವೂ ಒಂದು.

ಪುಟ–೩

೨. ಬರಲಿರುವ ವಿನಾಶವನ್ನು ತಡೆಯಲು ಸೂತ್ರ

ಅನು :- ನೀ. ಕಸ್ತೂರಿ –ಟಿ. ಕೃಷ್ಣಮೂರ್ತಿ

ಈ ಲೇಖನದಲ್ಲಿ ಹಿರಿಯ ಅರ್ಥಶಾಸ್ತ್ರ ವಿಜ್ಞಾನಿ ದಿವಂಗತ ಡಾ|| ಜೆ. ಸಿ. ಕುಮಾರಪ್ಪನವರು ಪ್ರಚಲಿತ ಆರ್ಥಿಕ ಸಮಸ್ಯೆಗಳಿಗೆ ಮೂಲಭೂತವಾದ ಪರಿಹಾರಗಳನ್ನು ಸೂಚಿಸಿದ್ದಾರೆ.

ಪುಟ–೧೩

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೩
ಸಂಚಿಕೆ : ೭, ೮
ಫೆಬ್ರವರಿ, ಮಾರ್ಚ್ ೨೦೦೩

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ :

ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ : ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :
ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧
ದೂರವಾಣಿ :
೦೮೨೩೬-೬೪೮೭೫೪

ಹೊಸವರ್ಷ

ಗಂಟೆ ಹನ್ನೆರಡು ಹೊಡೆದದ್ದೇ ತಡ
ಕಾದು ಕೂತಿದ್ದ ಹುಡುಗರು
ತಟ್ಟಿ ಚಪ್ಪಾಳೆ
ಹೊಸ ವರ್ಷಕ್ಕೆ ಸ್ವಾಗತ ಹಾಡಿದರು :
ಸಿಡಿಸಿದರು ಪಟಾಕಿಯ ಸರಮಾಲೆ
ಕಿವಿ ಪೋಟುಬೀಳುವ ಹಾಗೆ.

ಸರಿಯೇ, ಇದೇ ಈಗ ಹುಟ್ಟಿದ ಈ ವರ್ಷ
ಬರುವ ವರ್ಷ, ಅದರ ಮುಂದಿನ ವರ್ಷ
ಎಲ್ಲವೂ ಹೊಸವೇ,
ದಿನದಿನವೂ ಹುಟ್ಟಿಬರುವ
ಹೊಸ ಸೂರ್ಯನ ಹಾಗೆ.

ಈ ವರ್ಷಗಳ ವರ್ತುಲಗಳಾವರ್ತದಲ್ಲಿ
ಸಿಕ್ಕು
ಹಳಹಳಿಸಿ ಹಳಬರಾಗುವ ನಮಗೆ
ಈ ಹೊಸ ವರ್ಷ
ಹಳೆಯ ವರ್ಷಕ್ಕೆ ತೆರುವ ಚಕ್ರಬಡ್ಡಿ:
ಸಿಡಿವ ಪಟಾಕಿ
ಬಂದ ಎಚ್ಚರ, ಅಷ್ಟೆ.

-ಡಿ. ಎ. ಶಂಕರ

ವಿಚಾರ ದೀಪ್ತಿ.......................

ಮಹಿಳೆಯರಿಗೆ ಕುರಾನ್ ನೀಡಿರುವ ಹಕ್ಕನ್ನು ಕೊಡಲು ಮುಸ್ಲಿಂ ಸಮಾಜ ನಿರಾಕರಿಸುತ್ತಿದೆ. ಮುಸ್ಲಿಂ ಮಹಿಳೆ ನಮಾಜ್ ಮಾಡಲು ಮಸೀದಿಗೆ ಹೋಗಬೇಕು. ಆ ಮೂಲಕ ಮಹಿಳೆಯರು ಸಂಘಟಿತರಾಗಬೇಕು. ಮಸೀದಿಗೆ ಮಹಿಳೆ ಹೋಗಬಾರದು ಎನ್ನಲು ಪುರುಷರು ಯಾರು? ಮಹಿಳೆ ಗರ್ಭದಲ್ಲಿ ಗಂಡುಭ್ರೂಣವನ್ನು ಹತ್ಯ ಮಾಡಿದರೆ ಪುರುಷರೇನು ಮಾಡಲಾದೀತು? ಸಮಾಜದಲ್ಲಿ ಮಹಿಳ–ಪುರುಷ ಎಂದು ಭೇಧ ಮಾಡುವುದೇ ತಪ್ಪು. ನಿಜ. ಆದರೆ ವಿಶ್ವದ ಯಾವುದೇ ಚರಿತ್ರೆ ಅಥವಾ ಧರ್ಮವನ್ನು ಗಮನಿಸಿದರೂ ಮಹಿಳೆ ಪ್ರವಾದಿಗೆ ಜನ್ಮದಾತಳಾಗಿರುತ್ತಾಳೆಯೇ ಹೊರತು ಪ್ರವಾದಿ ಅಲ್ಲ. ಯಾಕೆ ಹೀಗೆ? ನನ್ನ ಮದುವೆ ನಂತರದ ದಿನಗಳಲ್ಲಿ ಸಮಾಜದಿಂದ ಅನುಭವಿಸಿದ ಹಿಂಸೆಯಿಂದಲೇ ನಾನು ಮುಸ್ಲಿಂ ಎಂಬ ಭಾವನೆಯಿಂದ ಹೊರಗುಳಿಯುವಂತೆ ಮಾಡಿದೆ. ಎಲ್ಲ ಧರ್ಮಗಳೂ ಮಹಿಳೆಗೆ ಸ್ಥಾನ ಕೊಡಲು ನಿರಾಕರಿಸುತ್ತವೆ. ಆದ್ದರಿಂದ ಜಾತ್ಯಾತೀತ ನೆಲೆಗಟ್ಟಿನಿಂದಲೇ ಗುರುತಿಸಿಕೊಂಡು ಬದುಕುವ ಛಲ ಮಾಡಿದೆ. ಪುರುಷರಿಗೆ ಬುರುಕದ ಬಗ್ಗೆ ಏನು ಗೊತ್ತು? ಕೇವಲ ೨೪ ಗಂಟೆ ನೀವು ನಮ್ಮಂತೆ ಬುರುಕ ಧರಿಸಿ ನಾವು ಮಾಡುವ ಎಲ್ಲಾ ಕೆಲಸಗಳನ್ನು ನಿರ್ವಹಿಸಿ. ಆಗ ತಿಳಿಯುತ್ತದೆ ನಮ್ಮ ಸಂಕಟ.

-ಬಾನು ಮುಸ್ತಾಕ್

ಕೋಮು ಸೌಹಾರ್ದ ಮತ್ತು ಚಾರಿತ್ರ್ಯ ನಿರ್ಮಾಣ

ಲೇ : ಇಬ್ರಾಹೀಮ್ ಸಈದ್

ದೇಶ ವಿಭಜನೆಯ ಕಾಲದಲ್ಲಿ ಉತ್ತರದಲ್ಲಿ ಅತ್ಯಂತ ಉಗ್ರ ರೂಪದಲ್ಲಿ ವ್ಯಾಪಿಸಿದ್ದ ಈ ಕೋಮು ಗಲಭೆಗಳು ದಕ್ಷಿಣ ಭಾರತಕ್ಕೆ ಬಂದಿರಲಿಲ್ಲ. ಇಂದು ಕರ್ನಾಟಕ, ಕೇರಳ, ತಮಿಳ್ನಾಡು ಕೂಡಾ ಈ ಪಿಡುಗಿನಿಂದ ಸುರಕ್ಷಿತವಾಗಿ ಉಳಿದಿಲ್ಲ. ಹಿಂದೊಮ್ಮೆ ಶಾಂತಿ ಸುವ್ಯವಸ್ಥೆ, ಕೋಮು ಸಾಮರಸ್ಯ ಮತ್ತು ಧರ್ಮ ಸಹಿಷ್ಣುತೆಯ ನೆಲೆವೀಡಾಗಿದ್ದ ಕರ್ನಾಟಕದಲ್ಲಿ ಇಂದು ಕೋಮು ಗಲಭೆಗಳು ಆಗಾಗ ಸ್ಫೋಟಿಸುತ್ತಿರುತ್ತವೆ. ಈ ರಾಜ್ಯದ ಪಟ್ಟಣಗಳಾಗಲೀ, ಹಳ್ಳಿಗಳಾಗಲೀ ಇದರಿಂದ ಮುಕ್ತವಿಲ್ಲ.

ಕೋಮು ಗಲಭೆಗಳ ಮೂಲಕ ಆಗುವ ಜೀವ ಹಾಗೂ ಸೊತ್ತು ವಿತ್ತಗಳ ನಾಶ ನಿಜವಾಗಿ ಒಂದು ರಾಷ್ಟ್ರೀಯ ನಷ್ಟವಾಗಿದೆ. ಅದು ಯಾವ ಕೋಮಿಗೆ ಆದ ನಷ್ಟವಾದರೂ ಅದನ್ನು ನಾವು ರಾಷ್ಟ್ರೀಯ ಮಟ್ಟದಲ್ಲಿ ಅನುಭವಿಸಬೇಕು ಮಾತ್ರವಲ್ಲ ರಾಷ್ಟ್ರೀಯ ಮಟ್ಟದಲ್ಲಿ ನಾವೆಲ್ಲರೂ ಅದಕ್ಕೆ ಹೊಣೆಗಾರರಾಗುತ್ತೇವೆ. ಆದರೆ ನಾವದನ್ನು ಮರೆತು ಬಿಟ್ಟಿದ್ದೇವೆ. ಕ್ಷುಲ್ಲಕ ಕಾರಣಗಳಿಗೆ ಪರಸ್ಪರ ಕಚ್ಚಾಡುವ ಮೂಲಕ ನಮ್ಮ ಶಕ್ತಿ, ಐಕ್ಯ ಮತ್ತು ಶಾಂತಿಯನ್ನು ನಾವಾಗಿ ಹಾಳುಗೆಡಹುತ್ತಿದ್ದೇವೆ. ಕೆಲವರು ತಮ್ಮ ರಾಜಕೀಯ ಮಹತ್ವಾಕಾಂಕ್ಷೆಗಳ ಈಡೇರಿಕೆಗಾಗಿ ಕೋಮು ಗಲಭೆಗಳಿಗೆ ಕುಮ್ಮಕ್ಕು ನೀಡುತ್ತಾರೆ. ತಮ್ಮ ಸ್ವಾರ್ಥ ಸಾಧಿಸಲಿಕ್ಕಾಗಿ ನಮ್ಮನ್ನು ಪರಸ್ಪರ ಕಚ್ಚಾಡಿಸುತ್ತಾರೆ. ಆದರೆ ನಾವು ಆ ಪೈಕಿ ಯಾವುದೇ ಪ್ರಚಾರದ ಪ್ರಭಾವಕ್ಕೆ ಬಲಿಯಾಗಬಾರದು. ಅನ್ಯಥಾ ಈ ರಾಷ್ಟ್ರವನ್ನು ವಿನಾಶದಿಂದ ರಕ್ಷಿಸುವುದು ಸಾಧ್ಯವೇ ಇಲ್ಲ.

ಕೋಮು ಸೌಹಾರ್ದ ನಮ್ಮ ದೇಶದ ಪ್ರಗತಿಗೆ ಮಾತ್ರವಲ್ಲ ಅದರ ಉಳಿವಿಗೆ ಅನಿವಾರ್ಯವಾಗಿದೆ. ಅದನ್ನು ನಾವು ಮೈಗೂಡಿಸಿಕೊಳ್ಳಬೇಕು. ದೇಶ ಬಾಂಧವರನ್ನು ಈ ಬಗ್ಗೆ ಜಾಗೃತಗೊಳಿಸಬೇಕು. ನಾವೆಲ್ಲ ಒಂದೇ ದೇವನ ಸೃಷ್ಟಿಗಳು. ಹಿಂದೂ, ಕ್ರೈಸ್ತ ಮತ್ತು ಇಸ್ಲಾಮ್ ಧರ್ಮಗಳಲ್ಲಿ ಈ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ವೇದ ಗ್ರಂಥಗಳಲ್ಲಿ ಬ್ರಹ್ಮನೆಂದೂ, ಬೈಬಲ್‌ನಲ್ಲಿ ಯಹೋವನೆಂದೂ ಕರೆಯಲಾಗಿರುವ ಆ ಜಗದೇಕ ಸೃಷ್ಟಿಕರ್ತನೂ ಒಡೆಯನೂ ಪರಿಪಾಲಕನೂ ಆದವನನ್ನೇ ಕುರ್‌ಆನ್ ಅಲ್ಲಾಹ್ ಎಂದು ಪರಿಚಯ ಪಡಿಸುತ್ತದೆ. ಅವನು ತನ್ನ ಸೃಷ್ಟಿಗಳ ಬಗ್ಗೆ ಅತ್ಯಂತ ದಯಾಮಯನೂ ಕರುಣಾನಿಧಿಯೂ ಆಗಿರುವನು. ತಂದೆ ತಾಯಿಯ ಮನದಲ್ಲಿ ಮಗುವಿನ ಬಗ್ಗೆ

ಪ್ರೇಮ-ವಾತ್ಸಲ್ಯ, ಅನುಕಂಪವನ್ನು ಸೃಷ್ಟಿಸಿದ ಆ ಪ್ರಭುವು ಅವರಿಗಿಂತಲೂ ಅಧಿಕವಾಗಿ ಮಾನವನನ್ನು ಪ್ರೀತಿಸುವವನಾಗಿದ್ದಾನೆ. ಅವರು ಪರಸ್ಪರ ಜಗಳಾಡುತ್ತಿರುವುದಾಗಲೀ, ಅನ್ಯಾಯವಾಗಿ ಒಬ್ಬರನ್ನೊಬ್ಬರು ಮರ್ದಿಸುತ್ತಿರುವುದಾಗಲೀ ಆತನಿಗೆ ಎಂದೂ ಮೆಚ್ಚುಗೆಯಾಗಲಾರದು. ಒಂದೇ ಮನೆಯಲ್ಲಿ ಒಂದೇ ತಂದೆ ತಾಯಿಯ ಮಕ್ಕಳಲ್ಲಿ ಒಬ್ಬ ಕಮ್ಯೂನಿಸ್ಟ್, ಒಬ್ಬ ಕಾಂಗ್ರೆಸಿಗ, ಒಬ್ಬ ಆರೆಸ್ಸೆಸ್, ಮತ್ತೊಬ್ಬ ಸೋಶಲಿಸ್ಟ್‌ನಿರಬಹುದು. ಆದರೆ ಅವರು ಅದಕ್ಕಾಗಿ ಪರಸ್ಪರ ಜಗಳಾಡಬೇಕಾಗಿಲ್ಲ. ಮನೆಯ ಸುಸೂತ್ರವಾದ ನಿರ್ವಹಣೆಗೆ, ಕುಟುಂಬದ ಶಾಂತಿ ನೆಮ್ಮದಿಗೆ ಅದು ಅತ್ಯಗತ್ಯ. ಅದೇ ರೀತಿ ಒಂದೇ ದೇಶದ ನಿವಾಸಿಗಳಾದ ನಾವು ಪರಸ್ಪರ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಏಕತೆಯೊಂದಿಗೆ ಶ್ರಮಿಸಿದರೆ ಮಾತ್ರ ಈ ದೇಶ ಪ್ರಗತಿ ಹೊಂದೀತು. ತನ್ನ ಪಕ್ಷ ಯಾವುದಾಗಿದ್ದರೂ ಕುಟುಂಬದ ಸದಸ್ಯನೆಂಬ ನೆಲೆಯಲ್ಲಿ ಪ್ರತಿಯೊಬ್ಬನೂ ಕುಟುಂಬದ ಒಳಿತಿಗಾಗಿ ಶ್ರಮಿಸುವಂತೆ ತನ್ನ ಆಚಾರ ವಿಚಾರಗಳೇನೇ ಇದ್ದರೂ ದೇಶದ ಪ್ರಗತಿಗಾಗಿ ಒಟ್ಟಾಗಿ ಶ್ರಮಿಸಬೇಕಾದುದು ಅತ್ಯಾವಶ್ಯಕ. ಎಲ್ಲರೂ ದೇಶದ ಹಿತದೃಷ್ಟಿಯಿಂದ ದೇಶಕ್ಕೆ ಒಳಿತಾಗುವ ಕಾರ್ಯಗಳನ್ನು ಮಾಡುವಲ್ಲಿ ಪರಸ್ಪರ ಸಹಕರಿಸಬೇಕು. ಅದಕ್ಕೆ ನಮ್ಮ ಧರ್ಮವಾಗಲೀ, ಕುಲಗೋತ್ರಗಳಾಗಲೀ, ಭಾಷೆಯಾಗಲೀ ಎಂದೂ ಅಡ್ಡಿಯಾಗಲಾರದು.

ಇನ್ನು ನಮ್ಮಲ್ಲಿರುವ ಎಲ್ಲ ಜನರೂ ಪರಸ್ಪರ ಹೆಚ್ಚೆಚ್ಚು ತಿಳಿದುಕೊಳ್ಳುವ ಪ್ರಯತ್ನ ನಡೆಸಬೇಕಾಗಿದೆ. ನಮ್ಮ ಅವಿಶ್ವಾಸ, ಅಪನಂಬಿಕೆ, ಭಯ, ಆಶಂಕೆಗಳಿಗೆ ಪರಸ್ಪರರ ಬಗ್ಗೆ ನಮ್ಮ ಅಜ್ಞಾನವೇ ಕಾರಣವಾಗಿರುತ್ತದೆ. ನಾವು ಸ್ವಧರ್ಮವನ್ನು ಆಚರಿಸುವುದರೊಂದಿಗೆ ಅನ್ಯಧರ್ಮವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಮುಸಲ್ಮಾನರು ಹಿಂದೂ ಧರ್ಮದ ಬಗ್ಗೆಯೂ ಹಿಂದೂಗಳು ಇಸ್ಲಾಮ್ ಧರ್ಮದ ಬಗ್ಗೆಯೂ ತಿಳಿದುಕೊಳ್ಳಲು ಪ್ರಯತ್ನಿಸಿದರೆ ನಮ್ಮ ಅನೇಕ ಸಮಸ್ಯೆಗಳು ತನ್ನಿಂತಾನೇ ನಿವಾರಣೆಯಾದೀತು. ನಾವು ನಮ್ಮ ಮಧ್ಯೆ ಇರುವ ಅಜ್ಞಾನದ ಅಡ್ಡಗೋಡೆಯನ್ನು ಕೆಡವಿಹಾಕದೆ ಪರಸ್ಪರ ತಿಳುವಳಿಕೆ ಬೆಳೆಯದು. ಸಂಶಯಗಳು ನಿವಾರಣೆಯಾಗಲು ಸಾಧ್ಯವಿಲ್ಲ.

ಧರ್ಮದ ಹೆಸರು ಹೇಳಿ ನಮ್ಮಲ್ಲಿ ಪರಸ್ಪರ ಒಡಕು ಸೃಷ್ಟಿಸುವವರು ಯಾರೇ ಆಗಿದ್ದರೂ ಅವರು ದೇಶಪ್ರೇಮಿಗಳಾಗಿರುವುದು ಸಾಧ್ಯವಿಲ್ಲ. ಅವರು ಬಗ್ಗೆ ಜಾಗ್ರತೆವಹಿಸುವ ಅಗತ್ಯವಿದೆ. ದೇಶವನ್ನು ನಿಜವಾಗಿ ಪ್ರೀತಿಸುವವನು ಇಲ್ಲಿರುವ ಎಲ್ಲ ಧರ್ಮಾವಲಂಬಿಗಳ ಮಧ್ಯೆ ಐಕ್ಯ, ಸಾಮರಸ್ಯ ಮತ್ತು ಸೌಹಾರ್ದತೆಗೆ ಶ್ರಮಿಸುವನೇ ಹೊರತು ಪರಸ್ಪರ ದ್ವೇಷ, ಮತ್ಸರ ಮತ್ತು ಅಸೂಯೆಯನ್ನೂ ಅಪನಂಬಿಕೆ, ಆತಂಕ ಮತ್ತು ಭಯವನ್ನೂ ಸೃಷ್ಟಿಸಲಿಕ್ಕೆ

ಶ್ರಮಿಸಲಾರ. ಇದನ್ನು ದೇಶದ ಪ್ರಜೆಗಳಿಗೆ ನಾವು ಮನವರಿಕೆ ಮಾಡಿಕೊಡಬೇಕಾಗಿದೆ. ಕೋಮುದ್ವೇಷ ಹರಡುವವರು ದೇಶದ ಶತ್ರುಗಳು ಮಾತ್ರವಲ್ಲ ಅವರು ಯಾವ ಧರ್ಮದ ಅನುಯಾಯಿಗಳಾಗಿರುವರೋ ಆ ಧರ್ಮಕ್ಕೂ ದ್ರೋಹವೆಸಗುತ್ತಿದ್ದಾರೆ. ಯಾಕೆಂದರೆ ಯಾವ ಧರ್ಮವೂ ಇತರರನ್ನು ಅವರ ನಂಬಿಕೆ, ಆಚಾರ ವಿಚಾರಗಳಿಗಾಗಿ ದ್ವೇಷಿಸಬೇಕೆಂದು ಬೋಧಿಸುವುದಿಲ್ಲ.

ಬನ್ನಿ: ನಾವೆಲ್ಲ ಒಂದಾಗಿ ಈ ದೇಶದಿಂದ ಕೋಮು ವಿದ್ವೇಷವನ್ನು ಕೊನೆಗಾಣಿಸೋಣ. ಅದಕ್ಕಾಗಿ ಜನಮನಗಳಲ್ಲಿ ಪರಸ್ಪರ ಪ್ರೇಮ ವಿಶ್ವಾಸಗಳನ್ನು ಒಡಮೂಡಿಸಲು ಶ್ರಮಿಸೋಣ. ಮಾನವ ಕುಲದ ಸದಸ್ಯರೆಂಬ ನೆಲೆಯಲ್ಲಿ ಒಂದೇ ಕುಟುಂಬದ ಸದಸ್ಯರು ನಾವು. ಒಂದೇ ತಂದೆ ತಾಯಿಗಳ ಮಕ್ಕಳು. ಪರಸ್ಪರ ತಕೋದರಿ ಸಹೋದರರು. ನಮ್ಮನ್ನು ಒಗ್ಗೂಡಿಸುವ ಅಂಶಗಳು ಹಲವಾರು ಇವೆ. ಒಬ್ಬನೇ ದೇವನ ಸೃಷ್ಟಿಗಳೆಂಬ ನೆಲೆಯಲ್ಲಿ, ಒಂದೇ ಮನುವಂಶದ ಸದಸ್ಯರೆಂಬ ನೆಲೆಯಲ್ಲಿ, ಒಂದೇ ದೇಶದ ನಿವಾಸಿಗಳೆಂಬ ನೆಲೆಯಲ್ಲಿ ನಾವು ಒಗ್ಗಟ್ಟಾಗಿ ಬಯಸಿದರೆ ಜಗತ್ತಿನ ಯಾವ ಶಕ್ತಿಯಿಂದಲೂ ನಮ್ಮ ಏಕತೆಯನ್ನು ಮುರಿಯಲು ಸಾಧ್ಯವಾಗದು.

ನೀವು ಈ ದೇಶದ ಪ್ರಗತಿ ಬಯಸುವವರಾಗಿದ್ದರೆ ಶಾಂತಿ ನೆಮ್ಮದಿಯ ಬಾಳ್ವೆಯನ್ನು ಇಷ್ಟಪಡುವವರಾಗಿದ್ದರೆ ಮುಂದೆ ಬನ್ನಿ. ಕೋಮು ವಿದ್ವೇಷದ ಕಿಡಿಯನ್ನು ಪ್ರೇಮ ಸೌಹಾರ್ದದ ನೀರಿನಿಂದ ನಂದಿಸೋಣ! ನಮ್ಮ ನಗರ ಗ್ರಾಮಗಳಿಂದ ಈ ವ್ಯಾಧಿಯ ಮೂಲೋತ್ಪಾಟನೆಗಾಗಿ ಟೊಂಕಬದ್ಧರಾಗೋಣ! ಪರಸ್ಪರ ಸಂಬಂಧಗಳನ್ನು ಉತ್ತಮಗೊಳಿಸಲು, ಅವು ಕೆಡದಂತೆ ಕಾವಲು ನಡೆಸಲು, ಕೆಡುವ ಸಂದರ್ಭ ಒಂದಾಗಲಿಲ್ಲಾ ಪರಸ್ಪರ ಕುಳಿತು ಚರ್ಚಿಸಿ ಅದನ್ನು ಸರಿಪಡಿಸಲು ಸ್ಥಾನೀಯ ಕೋಮು ಸೌಹಾರ್ದ ಸಮಿತಿಗಳನ್ನು ರಚಿಸೋಣ. ನಮ್ಮ ಪ್ರದೇಶದಲ್ಲಿ ಇನ್ನೆಂದೂ ಯಾವುದೇ ರೀತಿಯ ಕೋಮು ಘರ್ಷಣೆಗೆ ಎಡೆಯಾಗದಂತೆ ಜಾಗ್ರತೆ ವಹಿಸೋಣ. ಆಗಾಗ ಕುಳಿತು ನಮ್ಮ ಸಮಸ್ಯೆಗಳ ಬಗ್ಗೆ, ಪರಸ್ಪರ ಸಂಬಂಧಗಳ ಬಗ್ಗೆ ಚರ್ಚಿಸೋಣ.

ನಮ್ಮ ಚಾರಿತ್ರ್ಯದ ಪತನ ಈ ದೇಶದ ಇನ್ನೊಂದು ಭಯಾನಕ ಸಮಸ್ಯೆ. ಇದು ಹತ್ತು ಹಲವು ಸಮಸ್ಯೆಗಳ ಮೂಲವೂ ಆಗಿದೆ. 'ಸತ್ಯಮೇವ ಜಯತೇ' ಎಂಬುದು ನಮ್ಮ ರಾಷ್ಟ್ರೀಯ ಧ್ಯೇಯ ವಾಕ್ಯ ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದರೆ ಇಂದು ಅಸತ್ಯ ನಮ್ಮ ಜೀವನದ ಎಲ್ಲೆಡೆ ವ್ಯಾಪಿಸಿದೆ. ಜೀವನದ ಯಾವ ರಂಗವೂ ಇದರಿಂದ ಹೊರತಲ್ಲ. ಅದು ನಮ್ಮ ವೈಯಕ್ತಿಕ, ಸಾಮೂಹಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಜೀವನದಲ್ಲಿ ಗಾಳಿ ನೀರಿನಷ್ಟು

ಹಾಸುಹೊಕ್ಕಾಗಿದೆ. ನಮ್ಮ ರಾಜಕೀಯ ರಂಗವಂತೂ ಅದರ ಅತ್ಯಂತ ನಿಕೃಷ್ಟ ಉದಾಹರಣೆಯಾಗಿದೆ.

ವಂಚನೆ ಇಲ್ಲದ ವ್ಯವಹಾರ ಇಂದು ನಡೆಯುವುದೇ ಇಲ್ಲ ಎನ್ನುವಷ್ಟರ ಮಟ್ಟಿಗೆ ನಮ್ಮ ಪರಿಸ್ಥಿತಿ ಹದಗೆಟ್ಟಿದೆ. ಪೇಟೆಯಲ್ಲಿ ಕಲಬೆರಕೆ ಇಲ್ಲದ ವಸ್ತು ಸಿಗುವುದೇ ದುಸ್ತರವಾಗಿದೆ. ಜೀವನಾವಶ್ಯಕ ವಸ್ತುಗಳಲ್ಲಿಯೂ ಜೀವರಕ್ಷಕ ಮದ್ದುಗಳಲ್ಲಿಯೂ ಮಾತ್ರವಲ್ಲ ಜೀವಹಾರಕ ವಿಷಗಳಲ್ಲಿಯೂ ಕಲಬೆರಕೆ ವ್ಯಾಪಿಸಿದೆ! ಅನೇಕ ರೋಗ ರುಜಿನಗಳಿಗೂ ಸಾವುನೋವುಗಳಿಗೂ ಇದು ಕಾರಣವಾಗುತ್ತದೆ. ತೂಕ ಅಳತೆಗಳಲ್ಲಿ ಕೊರತೆ ಒಂದು ಸಾಮಾನ್ಯ ಪಿಡುಗಾಗಿ ಮಾರ್ಪಟ್ಟಿದೆ. ಜನರನ್ನು ವಂಚಿಸುವ ಅನೇಕ ಹೊಸ ಮಾಧ್ಯಮಗಳು, ಜಾಹೀರಾತುಗಳು ದಿನನಿತ್ಯ ಹೊರಬರುತ್ತಿವೆ. ಈ ಪೈಕಿ ವನಸ್ಪತಿಯಲ್ಲಿ ದನದ ಕೊಬ್ಬು ಕಲಬೆರಕೆಯು ಹಗಣವು ರಾಷ್ಟ್ರೀಯ ಮಟ್ಟದಲ್ಲೇ ಪ್ರಖ್ಯಾತವಾಗಿರುವುದು ಸ್ಮರಣೀಯ.

ಸುರಾಪಾನವನ್ನು ಕೊನೆಗೊಳಿಸುವುದಾಗಲೀ ಅದನ್ನು ನಿಯಂತ್ರಿಸುವುದಾಗಲೀ ನಮ್ಮ ಸರಕಾರಗಳಿಂದ ಸಾಧ್ಯವಾಗಲಿಲ್ಲವೆಂಬುದು ಅತ್ಯಂತ ವಿಷಾದನೀಯ ಅಂಶ. ರಾಷ್ಟ್ರಪಿತ ಗಾಂಧೀಜಿಯವರು ಅದಕ್ಕಾಗಿ ಹಂಬಲಿಸಿದರು. ಅದನ್ನು ದೇಶದಿಂದ ನಿವಾರಿಸುವ ಪಣತೊಟ್ಟರು. ಆದರೆ ನಮ್ಮ ಸರಕಾರದಿಂದ ಅದನ್ನು ನಿರೋಧಿಸಲು ಸಾಧ್ಯವಾಗಲಿಲ್ಲ ಮಾತ್ರವಲ್ಲ ಸರಕಾರದ ಬೊಕ್ಕಸಕ್ಕೆ ಆದಾಯತರುವ ಒಂದು ಪ್ರಮುಖ ಮಾಧ್ಯಮವಾಗಿ ಇಂದು ಸಾರಾಯಿ ಅಂಗಡಿಗಳು ದೇಶದಾದ್ಯಂತ ಹಳ್ಳಿ ಹಳ್ಳಿಗಳಲ್ಲಿ, ಪೇಟೆ ಬೀದಿಗಳಲ್ಲಿ ತಲೆಎತ್ತಿ ನಿಂತಿವೆ. ಅವು ನಮ್ಮ ನವಪೀಳಿಗೆಯನ್ನು ಕುಡಿದು ಮತ್ತರಾಗಿ ಜೀವನದ ವ್ಯಥೆಯೊಂದಿಗೆ ಜೀವನದ ಅರ್ಥ. ಉದ್ದೇಶ, ಧ್ಯೇಯ ಎಲ್ಲವನ್ನೂ ಮರೆಯುವಂತೆ ಮಾಡಿದೆ. ಇಲ್ಲಿಯೂ ನಮ್ಮ ವಂಚನಾತ್ಮಕ ನೀತಿ ಎದ್ದು ಕಾಣುತ್ತಿದೆ. ಒಂದೆಡೆ ಭಿತ್ತಿಪತ್ರಗಳ ಮೂಲಕ 'ಸುರಾಪಾನ ಸಂಸಾರ ಪತನ' ಎಂದು ಜಾಹೀರು ಪಡಿಸುವ ನಮ್ಮ ಸರಕಾರವು ಇನ್ನೊಂದೆಡೆ ಹರಾಜು ಹಾಕಿಸಿ ಅತ್ಯಧಿಕ ದುಡ್ಡು ತೆರುವವನಿಗೆ ಸಾರಾಯಿ ಅಂಗಡಿಯ ಗುತ್ತಿಗೆ ನೀಡುತ್ತದೆ.

ಜೂಜಾಟವು ಸುಲಿಗೆಯ ಒಂದು ವಿಧಾನ. ಅಕ್ರಮ ಮತ್ತು ಅನೈತಿಕ ಸಂಪಾದನೆಯ ಮಾಧ್ಯಮ ಮಾತ್ರವಲ್ಲ ಅನೇಕರ ಮನೆ ಹಾಳುಮಾಡಿದ ಮಹಾ ಪಾತಕ. ಆದರೆ ಅದೂ ನಮ್ಮಲ್ಲಿಂದು ವ್ಯಾಪಕವಾಗಿ ಹರಡಿದೆ. ನ್ಯೂಯಾರ್ಕ್ ಅರಳೆ ಧಾರಣೆಯಿಂದ ಹಿಡಿದು ಮಾರ್ಗದ ಬದಿಯ ಇಸ್ಪೀಟ್ ಎಲೆಯಾಟದ ತನಕ, ಧನಿಕ ವರ್ಗದ ಮೋಜಿನ ಆಟವಾದ ಅಶ್ವಜೂಜಿನಿಂದ

ಹಿಡಿದು ನಮ್ಮ ಹಳ್ಳಿಗರಾಡುವ ಕೋಳಿ ಅಂಕ ಮತ್ತು ತೆಂಗಿನಕಾಯಿ ಕುಟ್ಟುವ ತನಕದ ನೂರಾರು ಜೂಜಾಟದ ತರಗಳು ನಮ್ಮಲ್ಲಿ ದಿನ ಬೆಳಕಿನಲ್ಲೇ ನಡೆಯುತ್ತಿವೆ. ಅದರ ವಿರುದ್ಧ ಕಾನೂನುಗಳ ಕೊರತೆಯೇನಿಲ್ಲ. ಆದರೆ ಕಾನೂನಿಗೆ ಅದು ಬರೆಯಲ್ಪಟ್ಟ ಶಾಯಿಯ ಬೆಲೆಯನ್ನೂ ಯಾರೂ ಕಲ್ಪಿಸುವುದಿಲ್ಲ. ಇಷ್ಟು ವೈವಿಧ್ಯಮಯ ಜೂಟಾಟದ ಮಾಧ್ಯಮಗಳು ಸಾಲದೆಂಬಂತೆ ನಮ್ಮ ಸರಕಾರವೇ ಈಗ ಜೂಜಾಟವನ್ನು ನಡೆಸುತ್ತಿವೆ. ಲಾಟರಿಯ ಹೆಸರಲ್ಲಿ ನಡೆಯುವ ಈ ಜೂಜಾಟದಲ್ಲಿ ಕೋಟಿಗಟ್ಟಲೆ ಪ್ರಜೆಗಳಿಂದ ಟಿಕೇಟಿಗೆ ಐವತ್ತು ಪೈಸೆಯಿಂದ ಐವತ್ತು ರೂಪಾಯಿಯವರೆಗೆ ಸಂಗ್ರಹಿಸಿ ಒಬ್ಬರನ್ನು ಲಕ್ಷಾಧೀಶರನ್ನಾಗಿಯೂ ಕೋಟ್ಯಾಧಿಪತಿಗಳಾಗಿಯೂ ಮಾಡಲಾಗುತ್ತದೆ. ಇದು ನಮ್ಮ "ಸಮಾಜವಾದೀ" ಸರಕಾರಗಳು ತಮ್ಮ ಸಮಾಜವಾದ ನೀತಿಯನ್ನು ಜಾರಿಗೊಳಿಸುವ ವಿಚಿತ್ರ ವಿಧಾನ. ಸರಕಾರವೇ ಈ ರೀತಿ ಜನರನ್ನು ಸಾಮೂಹಿಕ ಜೂಜಾಟದಲ್ಲಿ ತೊಡಗಿಸಿದರೆ ನಮ್ಮ ಚಾರಿತ್ರ್ಯ ಎಲ್ಲಿ ಉಳಿದೀತು ಎಂಬುದು ಸಾಮಾನ್ಯ ಮನುಷ್ಯನು ಊಹಿಸಿ ತಿಳಿಯಬಹುದಾದ ವಿಷಯವಾಗಿದೆ.

ಮಹಿಳೆಯ ಮಾನಕ್ಕೆ ಇಂದು ಯಾವ ಬೆಲೆಯೂ ಉಳಿದಿಲ್ಲ. ಆಕೆ ತಾಯಿ ಎಂಬ ಗೌರವವನ್ನೂ, ಮಗಳೆಂಬ ವಾತ್ಸಲ್ಯವನ್ನೂ, ಅತ್ತೆ ಎಂಬ ಅಭಿಮಾನವನ್ನೂ, ಸೊಸೆ ಎಂಬ ಪ್ರೀತಿಯನ್ನೂ, ಸೋದರಿ ಎಂಬ ಪಾವಿತ್ರ್ಯವನ್ನೂ ಕಳಕೊಂಡಿದ್ದಾಳೆ. "ವರದಕ್ಷಿಣೆಯ ಮೃತ್ಯು" ಎಂಬುದು ಆಕೆಗೆ ಒಂದು ಹೊಸ ಬಗೆಯ ಮರಣವನ್ನು ನೀಡಿದೆ. ಹಾಡುಹಗಲಲ್ಲಿ, ನಟ್ಟಬೀದಿಯಲ್ಲಿ ಆಕೆಯ ಮಾನಾಪಹರಣವಾಗುತ್ತಿದೆ. ಕಾನೂನು ಕೈಕಟ್ಟಿ ನಿಂತಿದೆ. ಕಾನೂನು ಜಾರಿಗೊಳಿಸುವ ಇಲಾಖೆಯು ಸ್ವಯಂ ಇಂತಹ ಪ್ರಕರಣಗಳಲ್ಲಿ ಶಾಮೀಲಾಗುವುದೇ ಮಾತ್ರವಲ್ಲ ಪೋಲೀಸ್ ಸ್ಟೇಶನುಗಳಲ್ಲೇ ಅನೇಕ ಮಾನಭಂಗ ಪ್ರಕರಣಗಳು ನಡೆದುದಕ್ಕೆ ನಾವು ಸಾಕ್ಷಿಗಳಾಗಿದ್ದೇವೆ. ಇದಕ್ಕೆ ನಮ್ಮ ಯುವ ಜನಾಂಗದಲ್ಲಿ ಕುಸಿಯುತ್ತಿರುವ ನೈತಿಕ ಮೌಲ್ಯಗಳು, ನೈತಿಕ ಶಿಕ್ಷಣಗಳಿಂದ ವಿಮುಕ್ತಿ ಪಡೆದ ನಮ್ಮ ಶಿಕ್ಷಣ ಪದ್ಧತಿ, ಲೈಂಗಿಕತೆ ಮತ್ತು ಕಾಮಪ್ರಚೋದನೆಗಳ ಮಾಧ್ಯಮಗಳಾಗಿರುವ ನಮ್ಮ ಕಥೆ, ಕಾದಂಬರಿ, ಪತ್ರಿಕೆ, ನಿಯತಕಾಲಿಕಗಳು, ಪೀತ ಪತ್ರಿಕೋದ್ಯಮ, ಅಶ್ಲೀಲ ಸಂಗೀತ, ಗಾನ, ಸಿನಿಮಾ, ವೀಡಿಯೋ, ಬ್ಲೂಫಿಲ್ಮ್ ಇತ್ಯಾದಿಗಳೇ ಕಾರಣವಾಗಿದೆ. ಇವೆಲ್ಲ ಸಾಲದೆಂಬಂತೆ ಕ್ಯಾಬರೆ ಎಂಬ ಹೆಸರಲ್ಲಿ ಸ್ತ್ರೀಯರನ್ನು ನಗ್ನ ನರ್ತನದಲ್ಲಿ ತೊಡಗಿಸುವುದು, ವಸ್ತ್ರ ಬಿಚ್ಚಿ ನರ್ತಿಸುವುದೂ ನಮ್ಮ ಎಲ್ಲ ನಗರಗಳಲ್ಲಿಯೂ ತಪ್ಪದೆ ನಡೆಯುವ ಕಾರ್ಯಕ್ರಮ. ಈ ಎಲ್ಲ ಅನೈತಿಕ ಅಶ್ಲೀಲ ಕಾರ್ಯಕ್ರಮಗಳಿಗೆ ಸರಕಾರದ ಮೇಲ್ವಿಚಾರಣೆ ಇಲ್ಲವೇ ಆಶ್ರಯ ಇದ್ದೇ ಇರುತ್ತದೆ. ಮತ್ತೆ ನಮ್ಮ ಸ್ತ್ರೀ

ಯರ ಮಾನ ಉಳಿಯುವುದೆಂತು? ನಮ್ಮ ಯುವಕರು ಕಾಮದಾಹಕ್ಕೆ ಬಲಿ ಬಲಿಯಾಗದಿರುವುದೆಂತು?

ನಮ್ಮ ಸಾರ್ವಜನಿಕ ಜೀವನವು ಭ್ರಷ್ಟಾಚಾರದಿಂದ ತುಂಬಿತುಳುಕುತ್ತಿದೆ. ಲಂಚವಿಲ್ಲದೆ ಯಾವುದೇ ಹಕ್ಕು ಗಳಿಸುವುದಾಗಲೀ, ಕರ್ತವ್ಯ ಪೂರೈಸುವುದಾಗಲೀ, ಕೆಲಸ ಸಾಧಿಸುವುದಾಗಲೀ ಸಾಧ್ಯವಿಲ್ಲ. ಸರಕಾರಿ ಕಛೇರಿಯ ಸಾಮಾನ್ಯ ಪೇದೆಯಿಂದ ಮಂತ್ರಿ ಮಾಗಧರ ತನಕ ಎಲ್ಲರೂ ಈ ರೋಗಕ್ಕೆ ತುತ್ತಾಗಿದ್ದಾರೆ. ಕೃಷಿ ಕಾರ್ಮಿಕನಿಂದ ಉನ್ನತ ವ್ಯಾಪಾರಿ ಅಥವಾ ಉದ್ಯಮಿಯ ತನಕ ಯಾವ ವರ್ಗದ ಜನರೂ ಇದಕ್ಕೆ ಬಲಿಯಾಗದವರಿಲ್ಲ.

ಇದು ನಮ್ಮ ಜೀವನದಲ್ಲಿ ಅತ್ಯಧಿಕ ಪ್ರಭಾವ ಬೀರಿರುವ ಕೆಲವು ಕೆಡುಕುಗಳ ಉಲ್ಲೇಖ ಮಾತ್ರ. ನಮ್ಮ ಕೆಡುಕುಗಳನ್ನು ಉದ್ಧರಿಸ ಹೊರಟರೆ ಈ ಲೇಖನವನ್ನು ಇದರಲ್ಲಿಯೇ ಮುಗಿಸಬೇಕಾದೀತು. ನಾವು ಈ ಕೆಡುಕುಗಳಿಂದ ಸುರಕ್ಷಿತರಾದವರೂ ಪವಿತ್ರರೂ ಪಾವನರೂ ಎಂಬ ಹೆಮ್ಮೆ, ಅಭಿಮಾನದೊಂದಿಗೆ ಇದನ್ನು ಹೇಳುತ್ತಿರುವುದೂ ಅಲ್ಲ. ಇದು ನಮ್ಮ ಕೆಡುಕುಗಳು. ಇದನ್ನು ನಿವಾರಿಸಬೇಕಾದವರು ನಾವೇ. ಜೀವನದಲ್ಲಿ ಮನುಷ್ಯನು ಸರ್ವತಂತ್ರ ಸ್ವತಂತ್ರನಾಗಿ ಸ್ವೇಚ್ಛಾವಿಹಾರಿಯಾಗಿ ಮಾರ್ಪಟ್ಟಾಗ ಜೀವನದ ಯಥಾರ್ಥ ಉದ್ದೇಶ-ಲಕ್ಷ್ಯಗಳು, ಧ್ಯೇಯ ಧೋರಣೆಗಳು ತಿಳಿಯದೇ ಹೋದಾಗ ಮನುಷ್ಯ ಜೀವನವು ಒಳಿತಿನಿಂದ ವಿರಹಿತವಾಗುವುದೂ ಕೆಡುಕಿನಿಂದ ಆವರಿಸಲ್ಪಡುವುದೂ ಅತ್ಯಂತ ಸ್ವಾಭಾವಿಕ. ಅದೇ ನಮ್ಮ ಜೀವನಗಳಲ್ಲೂ ಸಂಭವಿಸಿದೆ. ಇದರ ನಿವಾರಣೆ ಕಾನೂನಿನ ಮೂಲಕವೋ ಅಧಿಕಾರ ಬಲದ ಮೂಲಕವೋ ಆಗಲಾರದು. ಅದನ್ನು ಕೇವಲ ಮನಃಪರಿವರ್ತನೆ ಮತ್ತು ಆತ್ಮ ಸಂಸ್ಕರಣೆಯ ಮೂಲಕ ಸಾಧಿಸಬೇಕಾಗಿದೆ.

ಈ ಜಗತ್ತಿಗೆ ಒಬ್ಬ ಸೃಷ್ಟಿಕರ್ತನಿದ್ದಾನೆ. ಆತನು ಸರ್ವಶಕ್ತನು, ಸರ್ವಜ್ಞನು, ಸರ್ವಗುಣ ಸಂಪನ್ನನು ಎಂಬುದನ್ನು ನಾವೆಲ್ಲರೂ ಒಪ್ಪುತ್ತೇವೆ. ಆದರೆ ಅದನ್ನು ಬಾಯಿಮಾತಿನಲ್ಲಿ ಒಪ್ಪಿದರೆ ಮಾತ್ರ ಸಾಲದು. ನಮ್ಮ ಜೀವನದಲ್ಲಿ ಈ ವಿಶ್ವಾಸ ನಿರ್ಣಾಯಕ ಪಾತ್ರ ವಹಿಸುವಂತಾಗಬೇಕು. ಆತನು ನಮ್ಮ ಸೃಷ್ಟಿಕರ್ತ ಮಾತ್ರವಲ್ಲ ನಮ್ಮ ಪರಿಪಾಲಕ ಪ್ರಭುವೂ ಹೌದು. ನಮ್ಮ ಜೀವನದ ಎಲ್ಲ ಅವಶ್ಯಕತೆಗಳನ್ನು ಪೂರೈಸುವ ವ್ಯವಸ್ಥೆಯನ್ನು ಅತ್ಯದ್ಭುತವಾದ ರೀತಿಯಲ್ಲಿ ಭೂಮ್ಯಾಕಾಶಗಳಲ್ಲಿ ಮಾಡಿಟ್ಟವನು ಆತನೇ ಆಗಿರುತ್ತಾನೆ. ನಮ್ಮ ಭೌತಿಕ ಜೀವನದ ಎಲ್ಲ ಅವಶ್ಯಕತೆಗಳನ್ನು ಪೂರೈಸಿರುವ ಆ ಪ್ರಭು ನಮ್ಮ ಆಧ್ಯಾತ್ಮಿಕ ಜೀವನದ ಬಗ್ಗೆ ಅಲಕ್ಷ್ಯನಾಗಿರಲು ಸಾಧ್ಯವೇ ಇಲ್ಲ. ಅದಕ್ಕೆ

ಆವನು ವ್ಯವಸ್ಥೆಯನ್ನು ಮಾಡಿರಲೇಬೇಕು. ನಾವು ಯಾರು? ಯಾಕಾಗಿ ಈ ಭೂಲೋಕಕ್ಕೆ ಬಂದವರು? ಭೂಲೋಕದಲ್ಲಿ ನಮ್ಮ ನೆಲೆ ಏನು? ಇಲ್ಲಿ ನಾವು ನಿರ್ವಹಿಸಬೇಕಾದ ಕಾರ್ಯಗಳೇನು? ನಮ್ಮ ಜೀವನದ ಸನ್ಮಾರ್ಗ ಯಾವುದು? ಜೀವನದ ಧ್ಯೇಯವೇನು? ಮರಣದೊಂದಿಗೆ ನಮ್ಮ ಜೀವಮಾನ ಕೊನೆಗೊಳ್ಳುವುದೇ ಅಥವಾ ಆ ಬಳಿಕ ಒಂದು ಬದುಕು ಇದೆಯೇ? ಇಂತಿತ್ಯಾದಿ ಜೀವನದ ಮೂಲಪ್ರಧಾನವಾದ ಪ್ರಶ್ನೆಗಳಿಗೆ ಉತ್ತರ ನೀಡುವ ವ್ಯವಸ್ಥೆಯನ್ನು ಆವನು ಜೀವನದ ಆರಂಭದಿಂದಲೇ ಮಾಡಿದ್ದಾನೆ. ಈ ಜಗತ್ತಿಗೆ ಬಂದ ಎಲ್ಲ ಪ್ರವಾದಿಗಳು, ಪೈಗಂಬರರು, ದೇವ ಸಂದೇಶವಾಹಕರು ಇದನ್ನೇ ತಂತಮ್ಮ ಕಾಲದ ಮನುಷ್ಯರಿಗೆ ತಿಳಿಸಲು ಬಂದಿದ್ದರು. ಮಾತ್ರವಲ್ಲ ಅವರು ಸ್ವಯಂ ದೇವನ ಇಚ್ಛೆಯಂತೆ ಬಾಳಿ ತೋರಿಸಿದರು.

ಮನುಷ್ಯರಾದ ನಾವು ದೇವನ ಅತ್ಯುತ್ತಮ ಸೃಷ್ಟಿಗಳು. ಆತನ ಕಾರ್ಯಭಾರಿಗಳು. ಭೂಮುಖದ ಮೇಲೆ ಆತನ ಪ್ರತಿನಿಧಿಗಳು. ನಮ್ಮನ್ನು ವಿಚಾರ ಆಚಾರಗಳ, ವಿಶ್ವಾಸ-ಕರ್ಮಗಳ ಒಂದು ಪರೀಕ್ಷಾರ್ಥವಾಗಿ ಈ ಜಗತ್ತಿಗೆ ಕಳುಹಿಸಲಾಗಿದೆ. ದೇವಾಜ್ಞೆಯನ್ನು ಸಂಪೂರ್ಣವಾಗಿ ಪಾಲಿಸಿ ಆತನು ತನ್ನ ಪ್ರವಾದಿಗಳ ಮೂಲಕ ಹಾಗೂ ಅಂತಿಮವಾಗಿ ತನ್ನ ಕೊನೆಯ ಪ್ರವಾದಿ ಪ. ಮುಹಮ್ಮದ್ [ಸ]ರ ಮೂಲಕ ಜಗತ್ತಿಗೆ ಕಳುಹಿಸಿದ ಮಾರ್ಗದರ್ಶನಕ್ಕೆ ಬದ್ಧವಾಗಿ ಜೀವಿಸುವುದೇ ನಮ್ಮ ಸರಿಯಾದ ನಿಯಮ. ಇಹಲೋಕದಲ್ಲಿ ಸುಖಶಾಂತಿ, ಸಮಸ್ಯೆಗಳ ಪರಿಹಾರ, ಪರಸ್ಪರ ಸಂಬಂಧ ಸುಧಾರಣೆ ಮತ್ತು ಪರಲೋಕದಲ್ಲಿ ಮೋಕ್ಷ, ಸ್ವರ್ಗ ಎಲ್ಲವೂ ಇದನ್ನೇ ಆಶ್ರಯಿಸಿದೆ. ಹುಟ್ಟಿನಲ್ಲಿ ಮನುಷ್ಯರೆಲ್ಲರೂ ಸಮಾನರಾಗಿದ್ದು, ಅವರ ಆಚಾರ ವಿಚಾರಗಳಿಂದ ಮಾತ್ರ ಅವರು ಉನ್ನತರೂ ಅಧಮರೂ ಆಗುತ್ತಾರೆ. ಹಾಗೆಯೇ ಪರಲೋಕದಲ್ಲಿಯೂ ಸುಖಶಾಂತಿಯನ್ನಾಗಲೀ ಕಷ್ಟ ಕಾರ್ಪಣ್ಯಗಳನ್ನಾಗಲೀ ಅನುಭವಿಸಬೇಕಾಗುತ್ತದೆ.

ಇಲ್ಲಿ ನಾವು ಸ್ವೇಚ್ಛಾವಿಹಾರಿಗಳಲ್ಲ. ನಮ್ಮಂಥ ಇತರ ಮನುಷ್ಯರ ಗುಲಾಮರೂ ಅಲ್ಲ. ಸೃಷ್ಟಿಕರ್ತನಾದ ದೇವನ ಹುಟ್ಟು ದಾಸರು, ಪ್ರಜೆಗಳು, ಗುಲಾಮರು. ಆತನ ದಾಸ್ಯಾನುಸರಣೆ, ಆರಾಧನೆ, ಉಪಾಸನೆ, ಪೂಜೆ, ಪುರಸ್ಕಾರವೇ ನಮ್ಮ ಜೀವನದ ನೈಜ ಕರ್ತವ್ಯ. ಆತನ ನಿಷ್ಠಾವಂತ ದಾಸರಾಗಿ ಆತನ ಸಂದೇಶವಾಹಕರನ್ನು, ಆತನ ದಿವ್ಯಗ್ರಂಥವನ್ನು ಜೀವನದ ಎಲ್ಲ ರಂಗಗಳಲ್ಲಿಯೂ ಅನುಸರಿಸಿ ಜೀವಿಸುವುದು ನಮ್ಮ ನೈಜ ಹೊಣೆ. ಇದುವೇ ಜೀವನದ ಸನ್ಮಾರ್ಗ. ಉಳಿದ ಎಲ್ಲ ಮಾರ್ಗಗಳು ದುರ್ಮಾರ್ಗಗಳು. ಆ ಮಾರ್ಗಗಳಲ್ಲಿ ನಡೆದಿರುವುದರಿಂದಲೇ ಜೀವನದಲ್ಲಿ ಅಶಾಂತಿ, ಕ್ಷೋಭೆ, ಗೊಂದಲ ತಾಂಡವವಾಡುತ್ತವೆ. ಮನುಷ್ಯರು ಮನುಷ್ಯರನ್ನೇ ಶೋಷಿಸುವ ಮರ್ದಿಸುವ

ದಮನಿಸುವ ಸಂಪ್ರದಾಯಗಳು ಜಾರಿಗೊಳ್ಳುತ್ತವೆ. ಧಾರ್ಮಿಕ, ಸಾಮಾಜಿಕ ಆರ್ಥಿಕ, ರಾಜಕೀಯ ಎಲ್ಲ ಮಟ್ಟಗಳಲ್ಲಿಯೂ ಈ ಶೋಷಣೆ ತಾಂಡವವಾಡುತ್ತದೆ. ಇದರಿಂದ ವಿಮೋಚನೆಯ ಮಾರ್ಗ ಕೇವಲ ಒಂದೇ, ಎಲ್ಲ ದಾಸ್ಯ ಶೃಂಖಲೆಗಳನ್ನು ನಮ್ಮ ಕೊರಳುಗಳಿಂದ ಕಿತ್ತೆಸೆದು ಸಂಪೂರ್ಣವಾಗಿಯೂ ನಿಶ್ಶರ್ತವಾಗಿಯೂ ದೇವನ ಆಜ್ಞೆಗೆ ವಿಧೇಯವಾಗುವುದೇ ಆ ಮಾರ್ಗ. ಅದರಿಂದ ಮಾತ್ರ ನಮ್ಮ ಜೀವನದಲ್ಲಿ ಕ್ರಾಂತಿ ಬಂದೀತು. ವೈಚಾರಿಕ ಕ್ರಾಂತಿ, ನೈತಿಕ ಕ್ರಾಂತಿ, ಆಧ್ಯಾತ್ಮಿಕ ಕ್ರಾಂತಿ, ಸಮಗ್ರ ಕ್ರಾಂತಿ, ಸಂಪೂರ್ಣ ಕ್ರಾಂತಿ. ಆದರೆ ಇದು ದೇವಾಜ್ಞೆಯನ್ನು ಮಸೀದಿ ಮಂದಿರಗಳಿಗೆ, ಆರಾಧನಾ ವಿಧಿ ಮತ್ತು ಉಪಾಸನಾ ಕರ್ಮಗಳಿಗೆ ಮಾತ್ರ ಸೀಮಿತಗೊಳಿಸುವುದರಿಂದ ಸಾಧಿತವಾಗಲಾರದು. ಅದನ್ನು ಜೀವನದ ಎಲ್ಲ ರಂಗಗಳಿಗೂ ವಿಸ್ತರಿಸಬೇಕು ವ್ಯಾಪಾರ, ವಹಿವಾಟು, ಕೃಷಿ, ವ್ಯವಸಾಯ, ಸಾಮಾಜಿಕ, ಆರ್ಥಿಕ, ರಾಜಕೀಯ, ರಾಷ್ಟ್ರೀಯ, ಅಂತರಾಷ್ಟ್ರೀಯ ಜೀವನಗಳಿಗೆ ವ್ಯಾಪಿಸಬೇಕು. ಆಗ ಮಾತ್ರ ಅದರಿಂದ ನೈಜ ಪ್ರತಿಫಲ ದೊರೆಯುವುದು. ಒಬ್ಬ ಸರ್ವಶಕ್ತನೂ ಸರ್ವಜ್ಞನೂ ಆದ ದೇವನಿದ್ದಾನೆ ಎಂದು ನಾವು ಅಚಲವಾಗಿ ನಂಬುತ್ತಿರುವಾಗ ಆತನ ಆಜ್ಞೆಗಳನ್ನೂ ನಿರ್ದೇಶಗಳನ್ನೂ ವಿಚಾರಗಳಿಗೆ ಸೀಮಿತಗೊಳಿಸುವುದಾಗಲೀ, ಆರಾಧನೆ ಮತ್ತು ಉಪಾಸನೆಗಳಿಗೆ ಸೀಮಿತಗೊಳಿಸುವುದಾಗಲೀ, ಖಾಸಗಿ ಜೀವನದ ಕೆಲವು ಆಚಾರ ಸಂಪ್ರದಾಯಗಳಿಗೆ ಮಾತ್ರ ಸೀಮಿತಗೊಳಿಸುವುದಾಗಲೀ ಸರ್ವಥಾ ಖಂಡನೀಯ. ಜೀವನದ ಸುಪ್ರಧಾನವಾದ ಇತರ ರಂಗಗಳಲ್ಲಿಯೂ ಆತನ ಆದೇಶಗಳು ಪಾಲಿಸಲ್ಪಡಬೇಕು. ಆತನ ಮಾರ್ಗದರ್ಶನವು ಮಾನ್ಯವಾಗಬೇಕು. ಆತನ ಇಚ್ಛೆ ಈಡೇರಬೇಕು. ಆತನ ಶಾಸನಗಳು ಜಾರಿಗೊಳ್ಳಬೇಕು ಇದುವೇ ಜೀವನವನ್ನು ಶಾಂತಿಯುತ, ಸುಭಿಕ್ಷ, ಕಲ್ಯಾಣಪ್ರದ ಮತ್ತು ಕ್ಷೇಮ ಕರಗೊಳಿಸುವ ಉಪಾಧಿ. ಇದುವೇ ಪರಲೋಕ ಮೋಕ್ಷದ ಮಾರ್ಗ. ಇದುವೇ ಯಶಸ್ಸಿನ ಸೋಪಾನ. ಇದುವೇ ವಿಜಯದ ನಾಂದಿ. ಇದುವೇ ಜೀವನದ ಯಥಾರ್ಥ ಸನ್ಮಾರ್ಗ.

ಮರಣದೊಂದಿಗೆ ನಮ್ಮ ಜೀವನವು ಕೊನೆಗೊಳ್ಳುವುದಿಲ್ಲ. ಮರಂತು ಯಥಾರ್ಥ ಜೀವನವು ಆರಂಭವಾಗುತ್ತದೆ. ಆದರೆ ಇದು ಇಲ್ಲಿಯಂತೆ ಕರ್ಮ ಸ್ವಾತಂತ್ರ್ಯವಿರುವ ಜೀವನವಾಗಿರಲಾರದು. ಅದು ಫಲಿತಾಂಶದ ಜೀವನ. ಇಲ್ಲಿ ಮಾಡಿದ ಕರ್ಮಗಳ ಫಲ-ದುಷ್ಫಲಗಳನ್ನು ಅನುಭವಿಸಲು ಜೀವನ. ಅಲ್ಲಿ ಪ್ರತಿಯೊಬ್ಬನಿಗೂ ಅವನ ವಿಶ್ವಾಸ-ಶ್ರದ್ಧೆ ಹಾಗೂ ಆಚಾರ ಕರ್ಮಗಳಿಗೆ ಅನುಗುಣವಾಗಿ ಪ್ರತಿಫಲ ನೀಡಲಾಗುವುದು. ಅಲ್ಲಿ ಯಾವ ಶಿಫಾರಸ್ಸಾಗಲೀ, ಲಂಚವಾಗಲೀ, ವಶೀಲಿಬಾಜಿಯಾಗಲೀ, ವಕಾಲತ್ತಾಗಲೀ, ಪರಿಹಾರ ಧನ

ವಾಗಲೀ ಸ್ವೀಕರಿಸಲ್ಪಡದು. ಯಾರ ನೆರವೂ ಸಹಾಯವೂ ಅಲ್ಲಿ ಲಭಿಸದು. ಅದರಿಂದ ತಪ್ಪಿಸಿ ಓಡಿಹೋಗುವುದಾಗಲೀ, ಇತರ ರಕ್ಷಕ ಆಶ್ರಯದಾತರನ್ನು ಪಡೆಯುವುದಾಗಲೀ ಸಾಧ್ಯವಾಗಲಾರದು.

ಇಂತಹ ವಿಶ್ವಾಸ-ಶ್ರದ್ಧೆ ಮೂಡಿ ಬಂದಾಗ ಮಾತ್ರ ಜೀವನದಲ್ಲಿ ಪರಿವರ್ತನೆಯನ್ನು ನಿರೀಕ್ಷಿಸಬಹುದು. ಆಗ ಮಾತ್ರ ಜನ ಒಳಿತು-ಕೆಡುಕು ಗಳಲ್ಲಿ ವಿವೇಚನೆ ಮಾಡುವುದು ಸಾಧ್ಯ. ಸರ್ವಜ್ಞನೂ ಸರ್ವವೀಕ್ಷಕನೂ ಸರ್ವ ಶ್ರುತನೂ ಸರ್ವವ್ಯಾಪಿಯೂ ಆದ ಆ ವಿಶ್ವ ಸಾಮ್ರಾಟನ ಭಯ ಮತ್ತು ಪ್ರೇಮ ಮೂಡಿ ಬಂದರೆ ಮಾತ್ರ ಮನುಷ್ಯನು ನೀತಿವಂತನಾಗುವನು. ಮಾನವ ಬಾಳು ಬೆಳಗೀತು. ಅವನು ಅಂತರಂಗ-ಬಹಿರಂಗಗಳಲ್ಲಿ, ಪ್ರತ್ಯಕ್ಷ-ಪರೋಕ್ಷಗಳಲ್ಲಿ, ಖಾಸಗಿ ಮತ್ತು ಸಾರ್ವಜನಿಕ ರಂಗಗಳಲ್ಲಿ ಸಜ್ಜನನಾಗಿ, ಸತ್ಯಶೀಲಿಯಾಗಿ, ಪ್ರಾಮಾಣಿಕ ಮತ್ತು ಸತ್ಯಸಂಧ ಮಾನವನಾಗಿ ಬಾಳಬಹುದು.

ಮನುಷ್ಯನ ಚಾರಿತ್ರ್ಯ ನಿರ್ಮಾಣಕ್ಕೆ ಈ ವಿಶ್ವಾಸಗಳು ಬುನಾದಿಯಾಗ ಬೇಕು. ಈ ವಿಶ್ವಾಸಗಳನ್ನು ಜನಮನಗಳಲ್ಲಿ ರೂಢಮೂಲವಾಗಿಸಬೇಕು. ನಮ್ಮಲ್ಲಿ ಆರ್ಥಿಕ ಅಭಿವೃದ್ಧಿಗಾಗಿ ಅನೇಕ ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತಗೊಳಿಸಲಾಯಿತು. ಆದರೆ ಯಥಾರ್ಥ ಮಾನವನ ನಿರ್ಮಾಣಕ್ಕೆ, ಆತನ ಚಾರಿತ್ರ್ಯದ ಉತ್ಥಾನಕ್ಕೆ, ಆತನ ನೈತಿಕ ಅಭಿವೃದ್ಧಿಗೆ ನಾವು ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಯಾವ ಯೋಜನೆಯನ್ನೂ ಹಮ್ಮಿಕೊಂಡಿಲ್ಲ. ಜನರ ಹೊಟ್ಟೆ, ಬಟ್ಟೆ ಮತ್ತು ಮನೆಯ ಬಗ್ಗೆ ಇರುವ ಕಾಳಜಿಯ ಒಂದು ಶೇಕಡಾ ಕೂಡ ಚಾರಿತ್ರ್ಯದ ಈ ಬಗ್ಗೆ ನಾವು ತೋರಲಿಲ್ಲ. ಇದುವೇ ನಮ್ಮ ಪತನದ ದ್ಯೋತಕ. ದೇಶದಲ್ಲಿ ಚಾರಿತ್ರ್ಯ ನಿರ್ಮಾಣ ಮಾಡುವ ಮತ್ತು ಮನುಷ್ಯ ಸಂಬಂಧವನ್ನು ಅವನ ಸೃಷ್ಟಿಕರ್ತನೊಂದಿಗೂ ಅವನ ಸಹಜೀವಿಗಳೊಂದಿಗೂ ಉತ್ತಮಪಡಿಸುವ ಆಂದೋಲನಗಳ ಅಗತ್ಯವು ಈ ದೇಶಕ್ಕೆ ಹಿಂದೆಂದಿ ಗಿಂತಲೂ ಅಧಿಕವಾಗಿದೆ. ಮಾನವರಲ್ಲಿ ಪರಸ್ಪರ ಸಹೋದರತೆ, ಸಾಮಾಜಿಕ ಸಮಾನತೆ, ಆರ್ಥಿಕ ನ್ಯಾಯ, ಪರಸ್ಪರ ಪ್ರೇಮ, ಅನುಕಂಪವನ್ನು ಓಡಮೂಡಿ ಸಲು ಮತ್ತು ಅವರನ್ನು ಯಥಾರ್ಥ ಮಾನವನನ್ನಾಗಿ ಮಾರ್ಪಡಿಸಲು ಒಂದು ರಾಷ್ಟ್ರವ್ಯಾಪೀ ಚಳವಳಿಯನ್ನು ಆರಂಭಿಸಬೇಕಾಗಿದೆ. ಈ ಚಳವಳಿಗೆ ದೇಶದ ಎಲ್ಲ ನೀತಿಪ್ರಿಯರೂ ನ್ಯಾಯ ನಿಷ್ಠರೂ ಆದ ಜನರು ಜಾತಿ, ಮತ, ಧರ್ಮ, ಪಂಥ, ಕುಲ-ಗೋತ್ರ, ದೇಶ-ಭಾಷೆಗಳ ಭೇದವಿಲ್ಲದೆ ಸಹಕರಿಸಬೇಕಾಗಿದೆ.

ಒಂದು ಉತ್ತಮ ಸಮಾಜದ ನಿರ್ಮಾಣ ಕಾರ್ಯ, ವ್ಯಕ್ತಿಗಳ ಚಾರಿತ್ರ್ಯ ನಿರ್ಮಾಣದ ಮೂಲಕ ಮಾತ್ರ ಸಾಧ್ಯ. ವ್ಯಕ್ತಿಯಿಂದ ಕುಟುಂಬ, ಕುಟುಂಬ

ದಿಂದ ಸಮಾಜ, ಸಮಾಜದಿಂದ ರಾಷ್ಟ್ರ. ಒಂದು ಬಲಿಷ್ಠ ಮತ್ತು ಉನ್ನತ ಚಾರಿತ್ರ್ಯದ ದೇಶವನ್ನು ನಾವು ಕಟ್ಟಬಯಸುವುದಾದರೆ ವ್ಯಕ್ತಿಗಳ ನೈತಿಕ ನಿರ್ಮಾಣದತ್ತ ಗಮನಹರಿಸಬೇಕಾಗಿದೆ. ಬನ್ನಿ! ನಾವೆಲ್ಲರೂ ಕೂಡಿ ಈ ಧ್ಯೇಯಕ್ಕಾಗಿ ಒಂದು ರಾಷ್ಟ್ರವ್ಯಾಪಿ ಆಂದೋಲನವನ್ನು ನಡೆಸೋಣ. ಶಾಂತಿಯುತವಾದ ಮತ್ತು ರಚನಾತ್ಮಕವಾದ ಮಾರ್ಗಗಳ ಮೂಲಕ ಈ ಧ್ಯೇಯ ಸಾಧನೆಗಾಗಿ ಶ್ರಮಿಸೋಣ. ★

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ"ದ ಈ ಸಂಚಿಕೆಯನ್ನು ನಿಮ್ಮ ಬಳಿಗೆ ತಲುಪಿಸುವ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದೇವೆ! ಅನೇಕ ವರ್ಷಗಳ ನಂತರ ಪುನಃ ಪತ್ರಿಕೆ ದಿನದ ಬೆಳಕನ್ನು ಕಂಡಿದೆ. ಹೊಸ ಶತಮಾನದ, ಹೊಸ ಸಹಸ್ರಮಾನದ ಸಂಕ್ರಾಂತಿ ಕಾಲದ ಪ್ರೇರಣೆಯೊಂದಿಗೆ. ದಯಮಾಡಿ ವಾರ್ಷಿಕ ಚಂದಾ ೧೦೦/-ರೂ. ಗಳನ್ನಾಗಲೀ ಇಲ್ಲವೇ ಈ ಪತ್ರಿಕೆಯ ಮುಖಬೆಲೆ ೧೦/-ರೂ. ಗಳನ್ನಾಗಲೀ ನಿಮ್ಮ ಇಚ್ಛೆಗನುಸಾರವಾಗಿ ಕಳುಹಿಸಿ ಈ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ಕೋರಿಕೆ. -ಪ್ರಕಾಶಕರು

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ಬರಲಿರುವ ವಿನಾಶವನ್ನು ತಡೆಯಲು ಸೂತ್ರ

(೪-೧-೨೦೦೩ ರಂದು ಬೆಂಗಳೂರಿನಲ್ಲಿ ನಡೆದ ಜೆ.ಸಿ. ಕುಮಾರಪ್ಪ ಸಂಸ್ಮರಣೆಯ ವಿಚಾರ ಗೋಷ್ಠಿಯಲ್ಲಿ ಮಂಡಿಸಲಾದ ಲೇಖನ.)

ಅನು:- ನೀ. ಕಸ್ತೂರಿ **ಲೇ:- ಟಿ. ಕೃಷ್ಣಮೂರ್ತಿ**

ನಮ್ಮ ಈ ಬಹು ಮೂಲ್ಯ ಭೂಗ್ರಹ ವಿನಾಶದತ್ತ ಸಾಗುತ್ತಿದೆ. ಇಲ್ಲಿ ವಾಸಿಸುವ ಜೀವಿಗಳಲ್ಲೆಲ್ಲ ಮಾನವನೇ ಅತ್ಯಂತ ಮುಂದುವರಿದ ಜೀವಿ. ಆದರೆ ಆತನೆ ಬರಲಿರುವ ಭೂಗ್ರಹ ನಾಶದ ಸಾಧನ ಆಗುತ್ತಿದ್ದಾನೆ. ಇದೇ ವಿಪರ್ಯಾಸ.

ರಯೋ-ಡಿ-ಜನೋರಿಯೋದಲ್ಲಿ ಭೂಮಿ ಶೃಂಗ ಸಭೆ ನಡೆಯಿತು. ಪರಿಸರ ಮತ್ತು ಅಭಿವೃದ್ಧಿ ಕುರಿತ ಆ ವಿಶ್ವ ಸಮ್ಮೇಳನಕ್ಕೆ ಅದರ ಮಹಾ ಕಾರ್ಯದರ್ಶಿ ಮಾರಿಸ್ ಸ್ಟ್ರಾಂಗ್ ಸಲ್ಲಿಸಿದ ತಮ್ಮ ವರದಿಯಲ್ಲಿ ಈ ಪರಿಸ್ಥಿತಿಯನ್ನು ಚೆನ್ನಾಗಿ ವರ್ಣಿಸಿದರು. "ನಾವು ಸರ್ವಕಾಲದಲ್ಲೂ ಅತ್ಯುತ್ತಮ ಜೀವಜಾತಿಗೆ ಸೇರಿದವರು. ಈಗ ಹತೋಟಿ ತಪ್ಪಿದ ಜೀವಜಾತಿ ಆಗಿದ್ದೇವೆ. ನಮ್ಮ ಯಶಸ್ಸೇ ನಮ್ಮನ್ನು ಭಯಂಕರ ಭವಿಷ್ಯದತ್ತ ನೂಕುತ್ತಿದೆ."

ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಮಾನವನನ್ನು ನಿಸರ್ಗದ ಒಡೆಯನನ್ನಾಗಿ ಮಾಡಿವೆ. ತನ್ನ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಳ್ಳಲು ಆತ ಗೊತ್ತುಗುರಿಯಿಲ್ಲದೆ ನಿಸರ್ಗವನ್ನು ಶೋಷಿಸುವುದರಲ್ಲಿ ಮುಳುಗಿದ್ದಾನೆ. ಈ ಗ್ರಹದಲ್ಲಿ ವಾಸಿಸುವ ಕೋಟ್ಯಾಂತರ ಜೀವ ಜಂತುಗಳಲ್ಲಿ ತಾನೂ ಒಬ್ಬ ಎಂಬುದನ್ನು ಮರೆತಿದ್ದಾನೆ. ನಿಸರ್ಗ ಮೂಲಗಳ ಈ ವಿವೇಚನಾರಹಿತ ಶೋಷಣೆ ಈ ಭೂಮಿಯನ್ನೇ ವಾಸಕ್ಕೆ ಅಯೋಗ್ಯವನ್ನಾಗಿಸುವ ಹೆದರಿಕೆ ಉಂಟಾಗುತ್ತಿದೆ.

ಮನುಷ್ಯನ ದುರಾಸೆಗೆ ಮಿತಿ ಇಲ್ಲ, ಹಿಂಗದ ದಾಹವನ್ನು ಅಡಗಿಸಿಕೊಳ್ಳುವ ಹುನ್ನಾರಿನಲ್ಲಿ ತನ್ನ ಜೊತೆಯವರಿಗೆ ಹಾಗೂ ತನ್ನ ಮುಂದಿನ ಪೀಳಿಗೆಯವರಿಗೆ ಏನು ಆದೀತೋ ಎಂಬ ಪರಿವೆಯೇ ಆತನಿಗೆ ಇಲ್ಲ. ಗಾಂಧೀಜಿ ಸರಿಯಾಗಿ ಹೇಳಿದರು. "ಪ್ರತಿಯೊಬ್ಬರ ಅಗತ್ಯತೆಯನ್ನು ಪೂರೈಸುವಶಕ್ತಿ ಭೂಮಾತೆಗೆ ಇದೆ. ಆದರೆ ಅವರ ಯಾರ ದುರಾಸೆಗಳನ್ನೂ ಪೂರೈಸಲಾರಳು."

ಭೂಮಿಶೃಂಗ ಸಭೆ :-

ಅಭಿವೃದ್ಧಿಯುಲ್ಲದುದರ ಪರಿಣಾಮವಾಗಿ ಭೂಗೋಳಕ್ಕೆ ಆಗಲಿರುವ ಭಯದ ನಿವಾರಣೆ ಇದು ಭೂಮಿ ಶೃಂಗ ಸಭೆಯ ಚರ್ಚಾವಿಷಯವಾಗಿತ್ತು. ಸಭೆ ನಡೆಸಲು

ಭಾರಿ ಎಚ್ಚರದಿಂದ ಯೋಚಿಸಿ ವಿವರವಾದ ಸಿದ್ಧತೆ ಮಾಡಲಾಗಿತ್ತು. ಸಭೆ ಜಗತ್ತಿನ ರಾಷ್ಟ್ರಗಳನ್ನು ಎರಡಾಗಿ ಒಡೆಯಿತು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು (ಉತ್ತರದವರು) ಮತ್ತು ಅಭಿವೃದ್ಧಿ ಶೀಲ ರಾಷ್ಟ್ರಗಳು (ದಕ್ಷಿಣದವರು). ನೈಸರ್ಗಿಕ ಸಂಪನ್ಮೂಲಗಳ ಬಳಕೆಯಲ್ಲಿ ಹಾಗು ವಿಶ್ವ ಪರಿಸರ ಮಾಲಿನ್ಯದಲ್ಲಿ ಉತ್ತರದ್ದೇ ಸಿಂಹಪಾಲು. ಮನುಕುಲದ ಹಿತಕ್ಕಾಗಿ ಈ ಗುಂಪುಗಳು ಒಂದು ಸರ್ವಸಮ್ಮತ ಒಪ್ಪಂದಕ್ಕೆ ಬರುತ್ತಾರೆಂಬ ನಿರೀಕ್ಷೆಯಿತ್ತು. ಎಷ್ಟು ಬಲವಾಗಿತ್ತು ಎಂದರೆ "ರಾಷ್ಟ್ರಗಳು ಹೇಳಿಕೊಳ್ಳುವಂತೆ ಅಭಿವೃದ್ಧಿ ಹೊಂದಲು ಇದೊಂದು ಕ್ರಾಂತಿ" ಎಂದೇ ನಾರ್ವೆಯ ಪ್ರಧಾನಿ ಉದ್ಗರಿಸಿದರು. ಆದರೆ ಶೃಂಗ ಸಭೆ ತನ್ನ ಗುರಿ ಮುಟ್ಟಲಿಲ್ಲ. ಕಾರಣ ಏನೆಂದರೆ, ಮಾಲಿನ್ಯವನ್ನು ತಡೆಗಟ್ಟಲು ಬೇಕಾದ ಕ್ರಮ ಗಳಿಗೆ ಹಣ ಒದಗಿಸುವ ವಚನವೀಯಲು ಬಹುತೇಕ ಮುಂದುವರಿದ ರಾಷ್ಟ್ರಗಳು ಒಪ್ಪಲಿಲ್ಲ. ಹೀಗಾಗಿ, "ಮೂರನೆಯ ಕ್ರಾಂತಿ" ಆಗಬೇಕಾಗಿದ್ದುದು "ಯಾವ ವಚನವೂ ಇಲ್ಲದಒಪ್ಪಂದ" ಆಯಿತು. ಇದು ಮಾರಿಸ್‌ಸ್ಟ್ರಾಂಗ್ ಅವರದೇ ಮಾತು.

ಈ ಸಂದರ್ಭದಲ್ಲಿ ಜೆ. ಸಿ. ಕುಮಾರಪ್ಪನವರ ಎಚ್ಚರಿಕೆಯನ್ನು ನೆನಪಿಸಿ ಕೊಳ್ಳದೆ ವಿಧಿಯಿಲ್ಲ. ಬರಲಿರುವ ಈ ಅಪಾಯವನ್ನು ಆರು ದಶಕಗಳ ಹಿಂದೆಯೇ ಅವರು ಕಂಡುಕೊಂಡಿದ್ದರು. ಅವರ ಎಚ್ಚರಿಕೆಯನ್ನು ನಾವು ಗಂಭೀರವಾಗಿ ತೆಗೆದುಕೊಂಡಿದ್ದಿದ್ದರೆ ಈ ಪರಿಸ್ಥಿತಿಯನ್ನು ತಪ್ಪಿಸಬಹುದಾಗಿತ್ತು. ಇವೊತ್ತು "ಪರಿಸರ ಸ್ನೇಹಿ" ಆದ ಸಮಾಜವನ್ನು ರಚಿಸುವುದು ಆಗತ್ಯ ಎಂದು ವಿಜ್ಞಾನಿಗಳು, ರಾಜಕಾರಣಿಗಳು ಬೊಬ್ಬೆ ಹೊಡೆಯುತ್ತಿದ್ದಾರೆ. ಕಂಡು ಬರುತ್ತಿರುವ ಸರ್ವ ನಾಶದ ಬಗ್ಗೆ ಜಗತ್ತು ಮೆಲ್ಲಮೆಲ್ಲನೆ ಎಚ್ಚರಗೊಳ್ಳುತ್ತಿದೆ. ಆದರೆ ನಿವಾರಣೆ ಕಾಣದೆ ನಿಸ್ಸಹಾಯಕವಾಗಿದೆ.

ಪಾಶ್ಚಿಮಾತ್ಯ ರೀತಿಯ ಭೋಗ. ಪ್ರಧಾನ, ಶೋಷಣಾಮಯ ಹಾಗೂ ತಾಳಿಕೊಳ್ಳಲು ಅಸಾಧ್ಯವಾದ ಅರ್ಥವ್ಯವಸ್ಥೆಯ ಕಾರಣದ ಬಗ್ಗೆ ಕುಮಾರಪ್ಪ ಆಳವಾಗಿ ಯೋಚಿಸಿದ್ದರು. "ಶಾಶ್ವತ ಅರ್ಥಶಾಸ್ತ್ರ" ಎಂಬ ತಮ್ಮದೇ ಆದ ಪರ್ಯಾಯ ಮಾರ್ಗವನ್ನು ಕೊಟ್ಟರು. ಅವರಿಗೆ ಖಚಿತವಾಗಿತ್ತು "ಶಾಂತಿಯ ಆರ್ಥಿಕತೆ" ಎರಡು ಮೂಲಭೂತ ಅಂಶಗಳ ಮೇಲೆ ನಿಂತಿವೆ ಎಂದು. ಒಂದು, ಜನರ ಶೋಷಣೆಯನ್ನು ನಿಲ್ಲಿಸುವುದು; ಎರಡು ಪ್ರಾಕೃತಿಕ ಸಂಪನ್ಮೂಲಗಳ ತಾಳಿಕೆ. ಮಾನವ ಅಥವಾ ಪ್ರಕೃತಿಗಳ ಯಾವುದೇ ಶೋಷಣೆಯಾಗಲಿ ಅದು ದ್ವೇಷ, ಹಿಂಸೆ ಮತ್ತು ಯುದ್ಧಗಳಿಗೆ ಅನುಕೂಲವಾದ ಪರಿಸ್ಥಿತಿಯನ್ನು ಉಂಟು ಮಾಡುತ್ತದೆ.

ತಾಳಿಬಲ್ಲ ಸಮಾಜ :-

ತಾಳಿಬಲ್ಲ ಸಮಾಜವನ್ನು ರಚಿಸಬೇಕು ಎಂದರು ಕುಮಾರಪ್ಪ. ಅವರ ಪ್ರಕಾರ ಪರಿಸರಕ್ಕೆ ದಕ್ಕೆ ಉಂಟುಮಾಡದ ರೀತಿಯಲ್ಲಿ ಆರ್ಥಿಕ ಬೆಳವಣಿಗೆಯನ್ನು ನಿಭಾಯಿಸಬಲ್ಲ ಸಮಾಜವೇ ತಾಳಿಬಲ್ಲ ಸಮಾಜ. ಆರ್ಥಿಕ ಅಗತ್ಯಗಳನ್ನು ಜೈವಿಕ ಕಾಳಜಿಗಳೊಂದಿಗೆ ಸಮತೋಲನಗೊಳಿಸಿ ಜನರ ಅಗತ್ಯವನ್ನು ಮುಂದಿನ ಪೀಳಿಗೆಗಳ ಭವಿಷ್ಯಕ್ಕೆ ಹಾನಿಯಾಗದ ಹಾಗೆ ಪೂರೈಸಬಹುದು. ಖನಿಜ ಸಂಪನ್ಮೂಲಗಳು ಮತ್ತು ಫಾಸಿಲ್ ಇಂಧನಗಳ ಸಿಕ್ಕಾಪಟ್ಟೆ ಉಪಯೋಗದ ವಿರುದ್ಧ ಎಚ್ಚರಿಕೆಯ ಗಂಟೆ ಬಾರಿಸಿದವರಲ್ಲಿ ಪ್ರಾಯಶಃ ಕುಮಾರಪ್ಪ ನವರೇ ಮೊದಲಿಗರು. ಆ ಸಂಪನ್ಮೂಲಗಳ ಮರುಸೃಷ್ಟಿ ಸಾಧ್ಯವಿಲ್ಲ. ಅವು ಭವಿಷ್ಯಕ್ಕೂ ಬೇಕು. ಮಾನವನ ಆರ್ಥಿಕ ಮುನ್ನಡೆ ಸಾಧಿಸಲು ಕಲ್ಲಿದ್ದಲು ಮತ್ತು ಪೆಟ್ರೋಲು ಮುಂತಾದ ಫಾಸಿಲ್ ಇಂಧನಗಳನ್ನು ಗೊತ್ತುಗುರಿ ಇಲ್ಲದೆ ಉರಿಸುತ್ತಿದ್ದಾನೆ. ಅವುಗಳನ್ನು ತಯಾರಿಸಲು ಪ್ರಕೃತಿ ಲಕ್ಷಾಂತರ ವರ್ಷಗಳನ್ನು ವ್ಯಯಿಸಿದೆ. ಈ ಸಂಪನ್ಮೂಲಗಳು ಮುಂದಿನ ಪೀಳಿಗೆಗಳ ಬಳಕೆಗಾಗಿ ಮರುಸೃಷ್ಟಿ ಆಗುವುದಿಲ್ಲ ಎಂಬುದರ ಲಕ್ಷ್ಯವೇ ಆತನಿಗಿಲ್ಲ. ತಮ್ಮದೇ ಆದ ರೀತಿಯಲ್ಲಿ. ಈ ಪರಿಸ್ಥಿತಿಯನ್ನು ಕುಮಾರಪ್ಪ ವರ್ಣಿಸಿದರು. ಈ ಸಂಪನ್ಮೂಲಗಳು ಬಕೆಟ್ಟಿನಲ್ಲಿ 'ಇಟ್ಟ ನೀರಿನ ಹಾಗೆ, ಬಕೆಟ್ಟಿನಿಂದ ಎಷ್ಟು ನೀರನ್ನು ತೆಗೆದುಕೊಂಡರೆ ಅಷ್ಟು ಕಡಿಮೆ ಉಳಿಯುತ್ತದೆ. ಇದಕ್ಕೆ ಬದಲಾಗಿ ಸೂರ್ಯ, ನೀರು, ಗಾಳಿ ಜೈವಿಕ ವಸ್ತು ಇತ್ಯಾದಿ ಶಕ್ತಿ ಮೂಲಗಳನ್ನು ಬಳಸಿರಿ. ಅವು ಮತ್ತೆ-ಮತ್ತೆ ಸೃಷ್ಟಿಗೊಳ್ಳುವಂತಹವು ಎಂದರು ಇವು ನದೀ ಜಲದಂತೆ, ಬತ್ತುವುದೇ ಇಲ್ಲ. "ಬಕೆಟ್ ಅರ್ಥ ವ್ಯವಸ್ಥೆ"ಗೂ "ನದೀ ಅರ್ಥ ವ್ಯವಸ್ಥೆ"ಗೂ ಇದೇ ವ್ಯತ್ಯಾಸ.

ಸೇವೆಯ ಅರ್ಥ ವ್ಯವಸ್ಥೆ :-

ಅರ್ಥಶಾಸ್ತ್ರವು ಮನುಷ್ಯ ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳುವ ವಿಧಾನ ತಿಳಿಸುವ ಒಂದು ಶಾಸ್ತ್ರ. ಈ ಆರ್ಥಿಕ ಪ್ರಕ್ರಿಯೆ ಮಾನವನನ್ನು ತನ್ನ ಸಹಚರರ ಸಂಪರ್ಕಕ್ಕೆ ತರುತ್ತದೆ. ಸಹಕಾರ ಇರಬಹುದು, ಇಲ್ಲವೇ ಸಂಘರ್ಷ ಇರಬಹುದು. ಈ ಸಂಪರ್ಕಗಳು ಸಸ್ಯ ಮತ್ತು ಪ್ರಾಣಿ ವರ್ಗಗಳಿಗೂ ಹಬ್ಬುತ್ತದೆ. ಕುಮಾರಪ್ಪನವರು ಪ್ರತಿಪಾದಿಸಿದ ಆರ್ಥವ್ಯವಸ್ಥೆ ಮಾನವ ತನ್ನ ನೆರೆಹೊರೆಯನ್ನು ಬಾಧಿಸದೆ ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗಿಸುವ ತತ್ವಗಳನ್ನು ಪ್ರತಿಪಾದಿಸುತ್ತದೆ, ಇದು ಉದ್ಯಮಶೀಲತೆಯ ಅರ್ಥಿಕತೆ, ಅವರ ಅತ್ಯುನ್ನತ ಮಾದರಿ ಸೇವೆಯ ಅರ್ಥವ್ಯವಸ್ಥೆಯೇ ಅದು ತಾಯಿ ತನ್ನ ಮಕ್ಕಳ ಸೇವೆ ಮಾಡಿದ ಹಾಗೆ, ಯಾವ ಅರ್ಥ ವ್ಯವಸ್ಥೆ ತನಗೆ ಆಸರೆ ಕೊಟ್ಟವನನ್ನೇ ಅಥವಾ ತನ್ನನ್ನು

ಪೊರೆದವನನ್ನೇ ತಳ್ಳಿ ಹಾಕುವುದೋ ಅದು ಪರಾವಲಂಬಿ ಆರ್ಥಿಕತೆ ಎಂದರು ಕುಮಾರಪ್ಪ. ಯಾವ ವ್ಯವಸ್ಥೆಯಲ್ಲಿ ಫಲಾನುಭವಿ ತನ್ನ ಆಶ್ರಯದಾತನಿಗೆ ಸಮಪ್ರಮಾಣದ ಅನುಕೂಲ ಮಾಡದೆ ತಾನು ಲಾಭ ಪಡೆಯುವನೋ, ಅದು ಪಾತಕಿ ಅಥವಾ ಕ್ರೂರ ಅರ್ಥವ್ಯವಸ್ಥೆ.

"ಶಾಶ್ವತ ಅರ್ಥಶಾಸ್ತ್ರ" ಎಂಬ ಕೃತಿಯಲ್ಲಿ ಈ ವಿಚಾರಗಳನ್ನು ಹೇಳಿದರು ಕುಮಾರಪ್ಪ. ಇವು ಗಾಂಧೀಜಿಗೆ ತುಂಬ ಹಿಡಿಸಿದವು. ಗಾಂಧೀಜಿ ಬರೆದರು– "ಇವುಗಳ ಮೂಲಕವೇ ನಾವು ಈಗ ನಮ್ಮ ಸುತ್ತ ಕಾಣುವ ಅಶಾಶ್ವತ ವ್ಯವಸ್ಥೆಗೆ ಬದಲಾಗಿ ಶಾಶ್ವತ ಆರ್ಥಿಕತೆಗೆ ತಲುಪುತ್ತೇವೆ." ಎಂದು ಈ ಗ್ರಾಮೋದ್ಯೋಗದ ಡಾಕ್ಟರು ತೋರಿಸುತ್ತಾರೆ. ದೇಹ ಮೇಲುಗೈಯಾಗಿ ಆತ್ಮವನ್ನು ಹೊಸಕಿ ಹಾಕಬೇಕೆ ಅಥವಾ ಆತ್ಮ ಪ್ರಬಲವಾಗಿ ದೇಹವನ್ನು ಗದ್ದು, ವಿನಾಶಿಯಾದ ದೇಹದ ಮೂಲಕ ತಾನು ವ್ಯಕ್ತಗೊಳಿಸುವುದೇ? ದೇಹದ ಅಲ್ಪ ಅಗತ್ಯಗಳು ಆರೋಗ್ಯಕರವಾಗಿ ಪೂರೈಕೆಯಾಗಿ ಅದು ಅವಿನಾಶಿಯಾದ ಆತ್ಮದ ಗುರಿ ಸಾಧನೆಗೆ ತಾನು ಅಡಿಯಾಳಾಗಲು ಉದ್ಯುಕ್ತವಾಗಿರುತ್ತದೆ. ಅದೇ ಸರಳ ಜೀವನ ಮತ್ತು ಉನ್ನತ ಚಿಂತನ.

ಸಂಘರ್ಷದ ಮೂಲ :

ಕುಮಾರಪ್ಪನವರ ಪಾಲಿಗೆ ಉತ್ಪಾದನೆ, ಕೊಳ್ಳುವಿಕೆ ಮತ್ತು ವಹಿವಾಟು ಕೇವಲ ಆರ್ಥಿಕ ವ್ಯವಹಾರ, ಎಂದು ಪರಿಗಣನೆ ಮಾಡುವಂಥ ಚಟುವಟಿಕೆಗಳಲ್ಲ ಅವು ನೈತಿಕ ಮತ್ತು ಆಧ್ಯಾತ್ಮಿಕ ಅಂಶಗಳನ್ನು ಒಳಗೊಂಡಿವೆ. ಒಬ್ಬ ವ್ಯಕ್ತಿ ಇನ್ನೊಬ್ಬನನ್ನು ಶೋಷಣೆ ಮಾಡಿದರೆ ಅಥವಾ ಒಂದು ಗುಂಪು ಇನ್ನೊಂದನ್ನು ಶೋಷಿಸಿದರೆ ಅಂತಹ ಕಾರ್ಯವೆಂದೂ ನೈತಿಕವಾಗಲಾರದು, ಆಧ್ಯಾತ್ಮಿಕವಾಗ ಲಾರದು. ಸಂಘರ್ಷಗಳು ವ್ಯಕ್ತಿಗಳ ನಡುವೆ ಇರಲಿ ಅಥವಾ ಗುಂಪು ಇಲ್ಲವೆ ರಾಷ್ಟ್ರಗಳ ನಡುವೆ ಇರಲಿ, ಅವೆಲ್ಲದರ ಬುಡದಲ್ಲಿ ಒಂದಲ್ಲ ಒಂದು ರೀತಿಯ ಶೋಷಣೆ ಇದ್ದೇ ಇರುತ್ತದೆ.

ವಿಕೇಂದ್ರೀಕರಣ :

ಶೋಷಣೆಗೆ ಅವಕಾಶವನ್ನು ನಿವಾರಿಸಲು ಕುಮಾರಪ್ಪ ವಿಕೇಂದ್ರೀಕೃತ ಉತ್ಪಾದನಾ ವಿಧಾನವನ್ನು ಪ್ರತಿಪಾದಿಸಿದರು. ಅಂಥ ವ್ಯವಸ್ಥೆಯಲ್ಲಿ ಒಡೆಯ– ಆಳು ಬೇರೆ ಬೇರೆ ಅಲ್ಲವೇ ಅಲ್ಲ. ಆಳೇ ಒಡೆಯ, ಕುಟುಂಬದ ಇತರರು ಆತನಿಗೆ ಸಹಾಯಕರು. ಉತ್ಪಾದನೆಯ ಸಲಕರಣೆಗಳು ಅವನ ಕೈಯಲ್ಲೇ. ಅದು ಸಾಧ್ಯವಾಗುವುದಕ್ಕೆ ಕಾರಣ ಅವುಗಳಲ್ಲಿ ಆತನ ಸಾಮರ್ಥ್ಯಕ್ಕೆ ಹೊರತಾದ ಬಂಡ ವಾಳ ಹೂಡಿಕೆ ಏನೂ ಇರುವುದಿಲ್ಲ. ಆತನಲ್ಲಿ ಏನು ಕೌಶಲ ಇದೆಯೋ ಅದೇ

ಸಾಕು. ಸ್ಥಳೀಯವಾಗಿ ದೊರಕುವ ಕಚ್ಚಾ ಪದಾರ್ಥಗಳನ್ನೇ ಸಂಸ್ಕರಿಸಿ, ಅದರ ಉತ್ಪಾದನೆಯನ್ನು ಆತನ ಸುತ್ತಲಿನವರೇ ಬಳಸಿಕೊಳ್ಳುವರು. ಒಬ್ಬರು ಇನ್ನೊಬ್ಬರನ್ನು ಶೋಷಣೆ ಮಾಡಲು ಅವಕಾಶ ಅತ್ಯಲ್ಪ.

ಸಂಪತ್ತಿನ ವಿತರಣೆ :

ವಿಕೇಂದ್ರೀಕೃತ ಉತ್ಪಾದನಾ ವ್ಯವಸ್ಥೆಯಲ್ಲಿ, ಉತ್ಪಾದಿತ ಸಂಪತ್ತಿನ ಸಾರ್ವತ್ರಿಕ ಹಂಚಿಕೆ ಖಚಿತ, ಚಕ್ರವರ್ತಿ ರಾಜಗೋಪಾಲಾಚಾರ್ಯರು ಗಾಂಧೀಜಿಯ ಇನ್ನೊಬ್ಬ ಜೊತೆಗಾರರು. ಸ್ವತಂತ್ರ ಭಾರತದ ಮೊದಲನೆಯ ಗವರ್ನರ್ ಜನರಲ್. ವಿಕೇಂದ್ರೀಕರಣ ಕುರಿತು ಅವರು ಹೀಗೆ ಸಮರ್ಥಿಸಿದರು. "ಸಂಪತ್ತು ಉತ್ಪಾದಿಸಿದ ನಂತರ ಅದನ್ನು ಸಮನಾಗಿ ಹಂಚಲಾರಿರಿ. ಅದಕ್ಕೆ ಒಪ್ಪುವ ಜನ ಸಿಗುವುದಿಲ್ಲ. ಆದರೆ ಉತ್ಪಾದನೆಗೆ ಮೊದಲೇ ನ್ಯಾಯಯುತವಾಗಿ ಹಂಚಲು ಸಾಧ್ಯವಾಗುವಂತೆ ಉತ್ಪಾದಿಸಲು ಸಾಧ್ಯ". ಇದು ೧೯೨೮ ರಷ್ಟು ಹಿಂದೆ ಹೇಳಿದ್ದು.

ಅರ್ಥಶಾಸ್ತ್ರ ಪರಿಭಾಷೆಯಲ್ಲಿ ಬಳಕೆಯನ್ನು ಉತ್ಪಾದನೆಯ ತಾಯಿ ಎಂದು ಭಾವಿಸಲಾಗುತ್ತದೆ. ಉತ್ಪಾದನೆ-ಬಳಕೆ ಉತ್ಪಾದನೆ ಒಂದು ಸರಪಳಿ. ಅದನ್ನು ಕಿತ್ತು ಹಾಕಬಾರದು. ಉತ್ಪಾದಿತವಾದುದು ಉಪಯೋಗವಾಗದೆ ಹೋದರೆ ಮುಂದೆ ಉತ್ಪಾದನೆ ಅಸಾಧ್ಯ. ಆದ್ದರಿಂದ ಆರ್ಥಿಕ ಕುಸಿತ ಅಂದರೆ ಬಳಕೆ ಆಗಲೇಬೇಕು. ಬಳಕೆ ಆಗಬೇಕಾದರೆ, ಕೊಳ್ಳುವ ಶಕ್ತಿಯನ್ನು ಹಂಚಬೇಕು. ಇದನ್ನು ಭಿಕ್ಷೆ ಕೊಟ್ಟು ಸಾಧಿಸಲಾಗುವುದಿಲ್ಲ. ಸಂಪಾದನೆಯ ಮಾರ್ಗವನ್ನು ಒದಗಿಸಬೇಕು. ಅಂದರೆ ಉದ್ಯೋಗ ಒದಗಿಸಬೇಕು. ಭಾರತದಲ್ಲಿ, ಮಾನವ ಶಕ್ತಿ ಅಪಾರವಾಗಿದೆ. ಬಂಡವಾಳ ಕಡಿಮೆ, ಇಲ್ಲಿ ವಿಕೇಂದ್ರೀಕೃತವೂ ಶ್ರಮ ಪ್ರಧಾನವೂ ಆದ ಉತ್ಪಾದನಾ ವಿಧಾನವೊಂದೇ ಆಶಾಕಿರಣ ಎಂದು ಕುಮಾರಪ್ಪನವರಿಗೆ ಪೂರ್ಣವಾಗಿ ಖಚಿತವಾಗಿತ್ತು. ತಮ್ಮ ವಿಚಾರದ ಸಮರ್ಥನೆಗೆ ಅವರು ಒಂದು ಸಮೀಕರಣ ಇತ್ತರು.

$$W = E + M$$

"W" ಎಂದರೆ ವೆಲ್ತ್, ಅಥವಾ ಸಂಪತ್ತು. "E" ಎಂದರೆ ಎಂಪ್ಲಾಯ್‌ಮೆಂಟ್ ಅಥವಾ ಪರಿಶ್ರಮ ಮತ್ತು "M" ಎಂದರೆ ಮನಿ ಅಥವಾ ಬಂಡವಾಳ, ಸಾಧನ ಸಂಪತ್ತು. ಭಾರತದಂತ ದೇಶದಲ್ಲಿ "M" (ಬಂಡವಾಳ) ಕಡಿಮೆ: E (ಪರಿಶ್ರಮ) ಬೇಕಾದಷ್ಟು. ಆದ್ದರಿಂದ W (ಸಂಪತ್ತು) ಬೇಕಾದರೆ "E" ಅಂಶವೇ ಮುಖ್ಯವಾಗಬೇಕು. ಹಾಗೆಂದರೆ ಸ್ವಯಂಚಾಲಿತವೂ ಕೇಂದ್ರೀಕೃತವೂ ಆದ ಭಾರಿ ಉದ್ಯಮಗಳು ನೀಡುವ ಬಂಡವಾಳ ಪ್ರಧಾನವಾದ ಹಾಗೂ ಶ್ರಮ ಉಳಿಸುವಂಥ

ವಿಧಾನಗಳು ಭಾರತಕ್ಕೆ ಸೂಕ್ತವಲ್ಲ. ಅವುಗಳಿಂದ ಸಂಪತ್ತು ಕೆಲವೇ ಜನರ ಕೈ ಸೇರುತ್ತದೆ. ಲಕ್ಷಾಂತರ ಜನ ಉದ್ಯೋಗ ಹೀನರಾಗುತ್ತಾರೆ. ದರಿದ್ರರಾಗುತ್ತಾರೆ.

ಟೀಕೆ :-

ಗಾಂಧೀ ಮತ್ತು ಕುಮಾರಪ್ಪ ಈ ವಿಕೇಂದ್ರೀಕರಣವನ್ನೂ, ಯಂತ್ರ ವಿರೋಧವನ್ನೂ ಪ್ರತಿಪಾದಿಸಿ, ಗಡಿಯಾರವನ್ನು ಹಿಂದಕ್ಕೆ ತಿರುಗಿಸುತ್ತಿದ್ದಾರೆ ಎಂದು ಕೆಲವರು ಟೀಕಿಸುತ್ತಾರೆ. ಇದು ಆ ಇಬ್ಬರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವದರಿಂದ ಬರುವ ಟೀಕೆ. ಗಾಂಧೀಜಿಯವರು ಯಂತ್ರಕ್ಕೆ ಒಂದು ಸ್ಥಾನ ಇರಬೇಕಾದುದನ್ನು ಒಪ್ಪಿದರು. ಆದರೆ ಕೆಲವು ಷರತ್ತು ಹಾಕಿದರು.

೧. ಯಂತ್ರಗಳು ಜನರು ಉದ್ಯೋಗವನ್ನು ಕಿತ್ತುಕೊಳ್ಳಬಾರದು.

೨. ಅವು ಹಳ್ಳಿಯ ಕಸುಬುದಾರರ ಆಯಾಸವನ್ನು ತಗ್ಗಿಸಿ, ಅವರ ದಕ್ಷತೆ ಮತ್ತು ಉತ್ಪಾದಕತೆಗಳನ್ನು ಹೆಚ್ಚಿಸಬೇಕು.

೩. ಅವು ಶೋಷಣೆಯ ಸಾಧನವಾಗಬಾರದು. ಗ್ರಾಮ ಕಸುಬುಗಳಿಗೆ ಪೈಪೋಟಿ ಮಾಡಬಾರದು.

೪. ಅವುಗಳಿಂದ ಕೆಲವೇ ಜನರಲ್ಲಿ ಸರ್ವಸಾಮ್ಯ ಅಥವಾ ಸೊತ್ತು ಮತ್ತು ಸತ್ತೆ (ಅಧಿಕಾರ) ಶೇಖರವಾಗುವಂತಾಗಬಾರದು.

೫. ಯಂತ್ರಗಳನ್ನು ತಂದು, ಭಾರಿ ಬಂಡವಾಳ ಮತ್ತು ಭಾರಿ ಪ್ರಮಾಣದ ಉತ್ಪಾದನೆ ಮಾಡುವುದು ಅಗತ್ಯವಾಗುವುದಾದರೆ, ಅಂಥ ಉದ್ಯಮಗಳು ಸರ್ಕಾರದ ವಶದಲ್ಲಿರಬೇಕು. ಅವು ಜನಹಿತಕ್ಕಾಗಿ ಮಾತ್ರ ವ್ಯವಸ್ಥೆಯಾಗಬೇಕು.

ಗಾಂಧೀಜಿ ಯಂತ್ರಗಳಿಗೆ ವಿರೋಧಿ ಮತ್ತು ಮೇಲಿನ ಷರತ್ತುಗಳು ಅಸಮರ್ಥನೀಯ ಎಂದು ಯಾರು ಹೇಳಬಲ್ಲರು?

ಮೊದಲ ನೋಟದಲ್ಲೇ ಒಲವು :-

ಜೆ. ಸಿ. ಕುಮಾರಪ್ಪ ಪಾಶ್ಚಾತ್ಯ ಶಿಕ್ಷಣ ಪಡೆದ ಪ್ರಪೋಕಿ ತರುಣ. ಭಾರಿ ಸಂಪಾದನೆ ಇದ್ದ ಚಾರ್ಟರ್ಡ್ ಅಕೌಂಟೆಂಟ್. ಅವರ ಪ್ರಬಂಧ "Public Finance & Our Poverty" (ಸಾರ್ವಜನಿಕಹಣ ಮತ್ತು ನಮ್ಮ ಬಡತನ). ಗಾಂಧೀಜಿಯ ಗಮನ ಸೆಳೆದಿತ್ತು. ಆ ವಿಷಯವನ್ನು ಚರ್ಚಿಸಲು. ಅವರು ಕುಮಾರಪ್ಪನವರನ್ನು ಸಬರಮತಿ ಆಶ್ರಮಕ್ಕೆ ಬರಹೇಳಿದರು. ಅಂದು ಮೇ ೯, ೧೯೨೯. ಆ ಭೇಟಿ ಕುಮಾರಪ್ಪನವರ ಪಾಲಿಗೆ ಬಹು ಮುಖ್ಯವಾಯಿತು.

ಗಾಂಧೀ, ಕುಮಾರಪ್ಪ ಇಬ್ಬರಿಗೂ ಅದು "ಮೊದಲ ನೋಟದಲ್ಲೇ ಒಲವು". ಗಾಂಧೀ–ಕುಮಾರಪ್ಪನವರ ಮೇಲೆ ಮೋಡಿ ಹಾಕಿದರು. ಅವರನ್ನು ತನ್ನ ಜೀವನವನ್ನೇ ದೇಶದ ಸೇವೆಗೆ ಅರ್ಪಿಸಿದ ಸನ್ಯಾಸಿಯನ್ನಾಗಿ ಮಾಡಿದರು. ಮಟಾರ್ ತಾಲ್ಲೂಕಿನ ಸರ್ವೇಕ್ಷಣೆ ಹಾಗೂ ಗುಜರಾತ್ ವಿದ್ಯಾಪೀಠದಲ್ಲಿ ಪ್ರಾಧ್ಯಾಪಕ ಹುದ್ದೆಯಿಂದ ಆರಂಭ ಮಾಡಿ ಗಾಂಧೀಜಿ ಕುಮಾರಪ್ಪನವರಿಗೆ ಅನೇಕ ಪ್ರಮುಖ ಕೆಲಸಗಳನ್ನು ವಹಿಸಿದರು. ಸ್ವಲ್ಪ ಕಾಲ "ಯಂಗ್ ಇಂಡಿಯಾ" ಪತ್ರಿಕೆಯ ಸಂಪಾದಕತ್ವವನ್ನು ವಹಿಸಿದ್ದರು. ಪತ್ರಿಕೆಯಲ್ಲಿ ಕುಮಾರಪ್ಪ ಬರೆದ ಕೆಲವು ಉಗ್ರ ಲೇಖನಗಳಿಂದಾಗಿ ಹಲವಾರು ಬಾರಿ ಸೆರೆಮನೆಗೆ ಹೋಗಬೇಕಾಯಿತು.

೧೯೩೪ ರಲ್ಲಿ ಮುಂಬೈನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಅಖಿಲ ಭಾರತ ಗ್ರಾಮೋದ್ಯೋಗ ಸಂಘವನ್ನು ಸ್ಥಾಪಿಸಲು ತೀರ್ಮಾನ ಮಾಡಿತು. ಅದರ ಸಂಘಟನಾಕಾರ್ಯ ಜೆ. ಸಿ. ಕುಮಾರಪ್ಪನವರಿಗೇ ಬಂತು. ಅದರ ಮೊದಲನೆಯ ಕಾರ್ಯದರ್ಶಿಯಾಗಿ, ಅನಂತರ ಅಧ್ಯಕ್ಷರಾಗಿ ಸತ್ತು ಹೋಗುತ್ತಿದ್ದ ಗ್ರಾಮೋದ್ಯೋಗಗಳ ಜೀರ್ಣೋದ್ಧಾರಕ್ಕೆ ಮಹತ್ತರ ಕೊಡುಗೆ ಸಲ್ಲಿಸಿದರು. ಗಾಂಧೀಜಿಯವರ ಆರ್ಥಿಕ ತತ್ವಗಳಿಗೆ ವೈಜ್ಞಾನಿಕ ನಿದರ್ಶನಗಳನ್ನಿತ್ತರು.

ಗುರುವಿನ ಹಾಗೆಯೇ ಕುಮಾರಪ್ಪನವರದೂ ಸರಳ ಜೀವನ. "ದರಿದ್ರ ನಾರಾಯಣ"ನೊಂದಿಗೆ ತಾದ್ಯಾತ್ಮ ಹೊಂದಿದ ಜೀವನ ಅವರದು ಕೊನೆಯವರೆವಿಗೂ ಬ್ರಹ್ಮಚಾರಿಯಾಗಿಯೇ ಉಳಿದರು. ಬಿದಿರುಗಳು ಕಟ್ಟಿ ಸಗಣಿ ಸಾರಿಸಿದ ಸಣ್ಣ ಗುಡಿಸಲೇ ಅವರ ಮನೆ. ಒಮ್ಮೆ ಲಾರ್ಡ್ ಲೋಥಿಯಾನ್ (ಮುಂದೆ ಅಮೇರಿಕಾದಲ್ಲಿ ಬ್ರಿಟನ್ ರಾಯಭಾರಿ ಆದವರು) ಕುಮಾರಪ್ಪನವರನ್ನು ಕಂಡು ಮಾತನಾಡಲು ಬಂದರು. ಅದೇ ಸಣ್ಣ ಗುಡಿಸಲು. ಒಳಕ್ಕೆ ಹೋಗಲು ತಲೆಬಾಗಬೇಕಾಯಿತು. ಒಳಗೂ ತಲೆ ಎತ್ತಿ ನೇರವಾಗಿ ನಿಲ್ಲಲು ಆಗಲಿಲ್ಲ, ಆ ಅವ್ಯವಸ್ಥೆಯಲ್ಲಿ ಅವರೆಂದರು "ನನ್ನನ್ನು ಶ್ರೀಮಂತ ಎನ್ನುತ್ತಾರೆ. ನಾನೊಬ್ಬ ಶಾಂತಿಪ್ರಿಯ ಎಂದು ಹೇಳಿಕೊಳ್ಳುತ್ತೇನೆ, ಆದರೆ ನಾನು ಮೂರ್ಖರ ಸ್ವರ್ಗದಲ್ಲಿ ಇದ್ದೆ ಎಂದು ನೀವು ತೋರಿಸಿದ್ದೀರಿ". ಅವರು ಆ ಸರಳ ಕುಟೀರದಲ್ಲೇ ಇದ್ದು ವಿದ್ಯಾಲಯದ ವಿದ್ಯಾರ್ಥಿ ನಿಲಯದಲ್ಲಿ ಊಟ ಮಾಡಿದರು.

"ಧೋತಿ ಜಾಮ" :–

ಕುಮಾರಪ್ಪನವರೇ ರೂಪಿಸಿದ ಬಟ್ಟೆ, ಜೀವನ ಪರ್ಯಂತ ಅದನ್ನೇ ತೊಡುತ್ತಿದ್ದರು. ಅದು ಅವರ ಸರಳತೆಗೂ ಮಿತವ್ಯಯಕ್ಕೂ ಸೊಗಸಾದ ವಿವರಣೆ. ಪೈಜಾಮದಂತೆ ಅದಕ್ಕೆ ಎರಡೇ ಮೀಟರ್ ಬಟ್ಟೆ ಸಾಕು. ಆದರೆ ನೋಡಲು ಅದು ಧೋತಿಯ ಹಾಗೆ ಇರುತ್ತಿತ್ತು, ಹಾಗೆಯೇ ಅನುಕೂಲವಾಗಿತ್ತು.

ಕುಮಾರಪ್ಪ ಯೋಜನಾಚತುರರು. ಆದರೆ ಯೋಜನೆಯ ಗುರಿ ಕಡು ಬಡ ವನ ಉದ್ಧಾರಕ್ಕೆ ಮಾತ್ರ ಎಂದು ನಂಬಿದ್ದರು. ಹಿಂದಿನ ಮಧ್ಯಪ್ರಾಂತ್ಯದಲ್ಲಿ ಅವರು ೬೦೦ ಹಳ್ಳಿಗಳಲ್ಲಿ ಸರ್ವೇಕ್ಷಣೆ ನಡೆಸಿದ್ದು ಸರ್ ಮಿರ್ಜಾ ಇಸ್ಮಾಯಿಲ್‌ಗೆ ತುಂಬಾ ಮೆಚ್ಚಿಗೆಯಾಯಿತು. ಆಗ ಒಂದು ರಾತ್ರಿ ಅವರು ಕೆಲವು ವಿದ್ಯಾರ್ಥಿ ಗಳೊಂದಿಗೆ ಒಂದು ಕಾಡಿನಲ್ಲಿ ಹೋಗುತ್ತಿದ್ದರು. ಸ್ವಲ್ಪ ದೂರದಲ್ಲಿ ಏನೋ ಹೋಗುತ್ತಿರುವುದು ಕಾಣಿಸಿತು. ಕಾಡು ಪ್ರಾಣಿ ಇರಬಹುದು ಎಂದುಕೊಂಡರು. ಹತ್ತಿರಕ್ಕೆ ಹೋಗಿ ನೋಡಿದರೆ, ಚಿಂದಿ ಬಟ್ಟೆ ಉಟ್ಟ ಒಂದು ಹೆಂಗಸು! ಈ ನಡು ರಾತ್ರಿಯಲ್ಲಿ ಏನು ಮಾಡುತ್ತಿರುವೆ?" ಎಂದು ಅವರು ಕೇಳಿದರು. ಮೊದಲು ನಾಚಿಕೆ ಪಟ್ಟರೂ ಅನಂತರ ಆ ಮುದುಕಿ, ತನ್ನ ಮಡಿಲಲ್ಲಿ ಇದ್ದ ಹುಲ್ಲಿನ ತೆನೆಯ ಕಂತೆಯನ್ನು ತೋರಿಸಿ ಹೇಳಿದಳು, "ಈ ಹುಲ್ಲಿನ ಕಾಳುಗಳನ್ನು ಆಯುತ್ತಿದ್ದೇನೆ. ನನಗೆ ತಿನ್ನಲು ಬೇರೆ ಗತಿ ಇಲ್ಲ. ಪುರುಳೆ ಕಡ್ಡಿ ಆಯ್ದು ಬೆಂಕಿಯಲ್ಲಿ ಕಾಳುಗಳನ್ನು ಬೇಯಿಸಿ ತಿನ್ನುತ್ತೇನೆ. ಹೊಟ್ಟೆ ಮುದುರಿಕೊಳ್ಳುವಂತೆ ಇದನ್ನೇ ತಿಂದು ಬದು ಕುತ್ತೇನೆ.", ತಾವು ಯೋಜನೆ ಮಾಡುವಾಗಲೆಲ್ಲ ಕುಮಾರಪ್ಪ ಈ ಬಡತನದ ಚಿತ್ರ ವನ್ನೇ ಮನಸ್ಸಿನಲ್ಲಿ ಇಟ್ಟುಕೊಂಡಿರುತ್ತಿದ್ದರು. ಯೋಜನೆಯ ವಿಷಯದಲ್ಲಿ ಸ್ವಾತಂತ್ರ್ಯಕ್ಕೆ ಮೊದಲೂ ಮತ್ತು ಅನಂತರವೂ ಪಂಡಿತ ನೆಹರು ಹಾಗೂ ಅವರ ಜೊತೆಯವರಿಗೂ ಕುಮಾರಪ್ಪನವರಿಗೂ ನಡುವೆ ವಿಚಾರ ಬೇಧ ಇದ್ದೇ ಇತ್ತು.

ವರ್ಧಾದ ಮಗನವಾಡಿಯಲ್ಲಿ :-

ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಇತ್ತು. ಅದು ಹೆಚ್ಚು ಕಡಿಮೆ ಸತ್ತೇ ಹೋಗಿದ್ದ ಗ್ರಾಮೋದ್ಯೋಗಗಳಿಗೆ ಹೊಸ ಜೀವ ಕೊಟ್ಟರು. ಅವುಗಳ ಆರ್ಥಿಕ ಸೂಕ್ತತೆಯನ್ನು ತೋರಿಸಿಕೊಡಲು ಹಲವಾರು ಘಟಕಗಳನ್ನು ರಚಿಸಲಾ ಯಿತು. ಉತ್ಪಾದಕತೆಯನ್ನು ಹೆಚ್ಚಿಸಲು ಮಧ್ಯಂತರ ತಂತ್ರಜ್ಞಾನವನ್ನು ಬಳಸ ಲಾಯಿತು. ದೇಶದ ಎಲ್ಲ ಕಡೆಗೆ ಸಾವಿರಾರು ಯುವಜನ ಆ ಉದ್ಯಮಗಳಲ್ಲಿ ತರಬೇತಿ ಪಡೆದರು. ಗ್ರಾಮೋದ್ಯೋಗ ಕಾರ್ಯಕ್ರಮ ಯೋಜಿಸಿ ಜಾರಿ ಮಾಡುವುದರಲ್ಲಿ ರಾಜ್ಯ ಸರ್ಕಾರಗಳಿಗೆ ಹಾಗೂ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡಲು ಕುಮಾರಪ್ಪನವರು ವ್ಯಾಪಕವಾಗಿ ಪ್ರವಾಸ ಮಾಡಿದರು."

ಗಾಂಧೀಜಿ ಮತ್ತು ಕುಮಾರಪ್ಪ ಬಿತ್ತಿದ ಬೀಜದ ಸಸಿಗಳೇ ಖಾದಿ ಗ್ರಾಮೋ ದ್ಯೋಗ ಆಯೋಗ ಹಾಗು ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಲಿಗಳು. ಆದ ರೇನು, ಒಂದು ಕಾಲದಲ್ಲಿ ಗಾಂಧೀಜಿಗೆ ಸರಿಸಮಾನನಾಗಿ ದುಡಿದ ರಾಷ್ಟ್ರನಾಯಕರು ಸ್ವಾತಂತ್ರ್ಯ ಬಂದ ನಂತರ, ಅವರ ಮಾತುಗಳನ್ನು ಮರೆಯಲು ತಡ ಮಾಡಲಿಲ್ಲ. ಪಾಶ್ಚಿಮಾತ್ಯ ಚಿಂತನ ಕ್ರಮವನ್ನು ಒಡನೆಯೆ ಒಪ್ಪಿಕೊಳ್ಳಲಾಯಿತು. ಖಾದಿ

ಗ್ರಾಮೋದ್ಯೋಗಗಳಿಗೆ ಕೇವಲ ಬಾಯಿಮಾತಿನ ಪ್ರೋತ್ಸಾಹ ಕೊಡಲಾಯಿತು. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಕಾಂಗ್ರೆಸ್‌ನ ಧ್ಯೇಯ "ಗ್ರಾಮ ಕೈಗಾರಿಕೆ" ಆಗಿತ್ತು. ಸ್ವಾತಂತ್ರ್ಯ ಬಂದ ನಂತರ, ನೀತಿ ನಿರ್ಧಾರಕ ನಾಯಕರು ಅದನ್ನು "ಶೀಘ್ರ ಕೈಗಾರಿಕೆ" ಎಂದು ಬದಲು ಮಾಡಿದರು. ಖಾದಿ ಗ್ರಾಮೋದ್ಯೋಗವನ್ನು ಸ್ವಾವಲಂಬಿ ಆಗಿಸುವ ಧ್ಯೇಯೋದ್ದೇಶದ ಮಹಾ ನಿರೀಕ್ಷೆ ಅದಕ್ಕೆ ಇಲ್ಲವಾಯಿತು. ಈಗ ಪ್ರತಿಯೊಂದು ಯೋಜನೆಯಲ್ಲೂ ಈ ಪ್ರಮುಖ ರಂಗಕ್ಕೆ ಸಾಯುವವನ ಬಾಯಿಗೆ ನೀರು ಬಿಡುವಂತೆ ಅಲ್ಪ ಸ್ವಲ್ಪ ನೆರವಿತ್ತು. ನರಳುತ್ತ ಉಸಿರು ಹಿಡಿದಿಡುವಂತೆ ದೂಡಲಾಗಿದೆ.

ಜೆ. ಸಿ. ಕುಮಾರಪ್ಪನವರು ಪ್ರತಿಪಾದಿಸಿದ ಪರಿಕಲ್ಪನೆಗಳಿಗೆ ಯೋಜಕರು ಕಿವಿಗೊಡದಿದ್ದರೆ, ನಮ್ಮ ನಾಡಿನ ಜನಕೋಟಿಗೆ ಯಾವ ಭವಿಷ್ಯವೂ ಇಲ್ಲ. ದೇಶದ ಯೋಜಕರು ಬಡಜನರ ಸಂಕಟಕ್ಕೆ ಕಿವುಡರಾದಂತಿದೆ. ಆ ಜನರ ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳಿಗೂ ನಿರುದ್ಯೋಗಕ್ಕೂ ಸಂಬಂಧ ಇದೆ ಎಂದು ಅರಿಯಲು ನಿರಾಕರಿಸುತ್ತಿದ್ದಾರೆ. ನಮ್ಮ ಯೋಜನೆಗಳು ಏನಿದ್ದರೂ ಕೊಳ್ಳುಬಾಕ ಸಂಸ್ಕೃತಿಗೇ ಇಂಬುಗೊಡುತ್ತಿದೆ, ಈ ಸಂಸ್ಕೃತಿಗೆ ತಡೆ ಹಾಕಲೇಬೇಕು. ಮಾನವೀಯ ಸಂಸ್ಕೃತಿಯನ್ನು ಬೆಳೆಸಬೇಕು. ಪ್ರತಿಯೊಬ್ಬ ವ್ಯಕ್ತಿಯ ಸ್ವಾತಂತ್ರ್ಯ ಹಾಗೂ ಕಲ್ಯಾಣಗಳೇ ನಮ್ಮ ಯೋಜಕರ ಮತ್ತು ಸರ್ಕಾರದ ಅತಿ ಮುಖ್ಯ ಕಾಳಜಿ ಆಗಬೇಕು. ಸಾಮೂಹಿಕ ಉತ್ಪಾದನಾ ಕಾರ್ಯಕ್ರಮಕ್ಕೆ ಒಂದು ನ್ಯಾಯಯುತ ಅವಕಾಶ ಕೊಡಬೇಕು. ನಮ್ಮ ವಿದೇಶಿ ವಿನಿಮಯ ವ್ಯವಸ್ಥೆ ಚೆನ್ನಾಗಿರಬೇಕು. ಅದಕ್ಕಾಗಿ ನಾವು ರಫ್ತು ಮಾಡಬೇಕು. ನಿಜ, ಆದರೆ, ನಾವು ಈಗ ನೋಡುವಂತೆ, ಇದೊಂದೇ ಸರ್ಕಾರದ ಕಾಳಜಿ ಆಗಬಾರದು. ಆ ಹಿರಿಯ ಜೀವ ಜೆ. ಸಿ. ಕುಮಾರಪ್ಪನವರಿಗೆ ಶ್ರದ್ಧಾಂಜಲಿ ಸಲ್ಲಿಸೋಣ. ಮನುಕುಲದ ಹಿತಕ್ಕಾಗಿ ಅವರು ತೋರಿದ ಮಾರ್ಗದಲ್ಲಿ ನಡೆಯೋಣ. ★

KA-SKMND-470 -2000, ಕರದ_ಅಂಚೆ
Regd NO. KAR/KAN/2000/3820
Val 3 Leaue 7. 8

Janapada Vichara-Kannada Monthly Digest Edited Printed and Published by Surendra Koulagi at Janapada Seva Trust Printing Press. Melkote on behalf of Janapada Seva Trust, (Regd) Melkote, Dist-Mandya 571 431.
Phone : 08236 / 648754